
ಜ್ಯಾಮಿತಿ

ಸಿ. ಎನ್. ಶ್ರೀನಿವಾಸ ಅಯ್ಯಂಗಾ
ಜಿ. ಟಿ. ನಾರಾಯಣರಾವ್

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು



ಜ್ಯಾಮಿತಿ Geometry

ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
ಜಿ. ಟಿ. ನಾರಾಯಣರಾವ್

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಪಠ್ಯಪುಸ್ತಕ : 44

GEOMETRY: C. N. Srinivasiengar and G. T. Narayana Rao
Published by Bangalore University, Bangalore. Pp. 332+viii 1974.

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಪ್ರಕಾಶಕರು
ಕೆ. ಸಿ. ಶಿವಪ್ಪ
ಉಪನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560039

ಬೆಲೆ: ರೂ. 6–00

ಮುದ್ರಕರು :
ಎಂ. ಎಸ್. ಚಿಂತಾಮಣಿ
ಈಸ್ಟರ್ನ್ ಪ್ರೆಸ್, ಬೆಂಗಳೂರು 560029

ಮುನ್ನುಡಿ

ಅನೇಕ ವರ್ಷಗಳ ಪರಭಾಷಾ ಪ್ರಭುತ್ವ, ಶಿಕ್ಷಣ ಮಾಧ್ಯಮವಾಗಲು ಪ್ರಾದೇಶಿಕ ಭಾಷೆಯ ಸಾಮರ್ಥ್ಯದ ಬಗ್ಗೆ ಇರುವ ಸಂದೇಹ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಯೋಗ್ಯ ಗ್ರಂಥಗಳ ಕೊರತೆ – ಇವು ಕನ್ನಡ ನಾಡಿನಲ್ಲಿ ಅನೇಕ ವಿಚಾರವಂತರನ್ನು ದಂಗುಬಡಿಸಿ, ಕನ್ನಡ ಭಾಷೆಗೆ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಮಾಧ್ಯಮವಾಗಲು ಅಡ್ಡಿಯನ್ನುಂಟುಮಾಡಿವೆ. ಸಾವಿರ ವರ್ಷಗಳ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪರಂಪರೆಯುಳ್ಳ ಕನ್ನಡ ಭಾಷೆಗೆ, ಶಿಕ್ಷಣ ಮತ್ತು ವಿಜ್ಞಾನ ಇತ್ಯಾದಿ ವಿಷಯಗಳ ವೈಚಾರಿಕ ಮಾಧ್ಯಮವಾಗಲು ಶಕ್ತಿ ಇಲ್ಲ ಎನ್ನುವುದು ಅಸಮಂಜಸ; ಅದನ್ನೀಗ ನಂಬಲೂ ಸಾಧ್ಯವಿಲ್ಲ.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ರೂಢಿಸುವ ಕಾರ್ಯದಲ್ಲಿ, ಕರ್ನಾಟಕದ ಇತರ ಎರಡು ವಿಶ್ವವಿದ್ಯಾಲಯಗಳಂತೆಯೇ ಶ್ರದ್ಧೆಯಿಂದ ಪಾಲುಗೊಂಡಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸಾಧನೆಗಳನ್ನು ಗಮನಿಸತಕ್ಕವರು, ಇದು ಆರಂಭವಾದದ್ದು 1964-65 ರಲ್ಲಿ ಎಂಬುದನ್ನು ಮರೆಯಬಾರದು. 1967 ರಂದು ಉನ್ನತ ಮಟ್ಟದ ಶಿಕ್ಷಣ ಹಾಗೂ ತಿಳಿವು ಕನ್ನಡದಲ್ಲಿಯೇ ದೊರಕುವಂತೆ ಮಾಡಬೇಕೆಂಬ ನಿರ್ಧಾರವನ್ನು ಕೈಕೊಂಡ ಈ ವಿಶ್ವವಿದ್ಯಾಲಯ, ಅದಕ್ಕೆ ಸಂಬಂಧಿಸಿದ ಪಠ್ಯಪುಸ್ತಕ ನಿರ್ಮಾಣಕ್ಕೆ ಆರಂಭಿಸಿತು. ಸರ್ಕಾರದ ನೆರವಿನಿಂದ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಕೊಂಡು, ಈ ಕೆಲವೇ ವರ್ಷಗಳ ಅವಧಿಯಲ್ಲಿ, ಈ ವಿಶ್ವವಿದ್ಯಾಲಯ ಗಣನೀಯವಾದ ಪ್ರಮಾಣದಲ್ಲಿ ಪುಸ್ತಕಗಳನ್ನು ಪ್ರಕಟಿಸಿ, ಎಲ್ಲರ ಗಮನವನ್ನು ಸೆಳೆದುಕೊಂಡಿದೆ.

ದಿನದಿನಕ್ಕೆ ಮಾನವಿಕ ಮತ್ತು ವೈಜ್ಞಾನಿಕ ಜ್ಞಾನ ಭರದಿಂದ ಬೆಳೆಯುತ್ತಿದೆ. ಪ್ರಗತಿಪರ ಜ್ಞಾನಾರ್ಜನೆಗೆ ಯೋಗ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಸಾಹಸದಲ್ಲಿ ನಮ್ಮ ಅಧ್ಯಾಪಕರು ತೊಡಗಿದ್ದಾರೆ. ಅವರ ಶ್ರದ್ಧೆ ಸಹಕಾರಗಳಿಂದ ನಮ್ಮ ಕಾರ್ಯ ಮತ್ತು ಶಿಕ್ಷಣಮಟ್ಟ ಸಾರ್ಥಕ ನಿಲುವನ್ನು ಮುಟ್ಟುವುದರಲ್ಲಿ ಸಂದೇಹವೇ ಇಲ್ಲ.

ಎಚ್. ನರಸಿಂಹಯ್ಯ
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ನಾಲ್ಕು ಮಾತು

ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣವಲಯದಲ್ಲಿ, ಭಾರತದ ಪ್ರಾದೇಶಿಕ ಭಾಷೆಗಳು ಶಿಕ್ಷಣ ಮಾಧ್ಯಮವಾಗಬಲ್ಲವೆ, ಒಂದು ವೇಳೆ ಆದರೆ ಬಹು ಪ್ರಾದೇಶಿಕ ಭಾಷೆಗಳನ್ನುಳ್ಳ ಭಾರತದಂತಹ ಪ್ರದೇಶದಲ್ಲಿ ಅದರ ಪರಿಣಾಮಗಳೇನು – ಎನ್ನುವ ಚರ್ಚೆ ಇನ್ನೂ ಈ ದೇಶದಲ್ಲಿ ನಡೆಯುತ್ತಲೇ ಇದೆ. ಈಜು ಬಾರದೆ ನೀರಿಗಿಳಿಯುವುದು ಹೇಗೆ ಎಂಬಂತಿರುವ ಈ ಚರ್ಚೆಗಳನ್ನು ಅತ್ತ ಬಿಟ್ಟು ಪ್ರಾದೇಶಿಕ ಭಾಷೆಗಳನ್ನು ಮೊದಲು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವ ಕಾರ್ಯದಲ್ಲಿ ಪ್ರವೃತ್ತರಾಗುವುದೊಂದೇ ನಮಗಿರುವ ದಾರಿ. ಏಕೆಂದರೆ, ಯಾವ ಶಿಕ್ಷಣವೇ ಆಗಲಿ ನಿಜವಾಗಿಯೂ ಪರಿಣಾಮಕಾರಿಯಾಗುವುದು, ನಮಗೆ ಪರಂಪರಾಗತವಾದ ಹಾಗೂ ಪರಿಸರದಲ್ಲಿ ಪ್ರಚಲಿತವಾದ ನಮ್ಮ ನಮ್ಮ ಭಾಷೆಯ ಮೂಲಕವೇ ಹೊರತು ಬೇರೆ ಭಾಷೆಯ ಮೂಲಕ ಖಂಡಿತ ಅಲ್ಲ. ಹಾಗೆ ಆ ಭಾಷೆಯನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಪಳಗಿಸಿಕೊಳ್ಳಬಲ್ಲ ಸಾಮರ್ಥ್ಯ ಆಯಾ ಭಾಷೆಯ ಬಗ್ಗೆ ಅಭಿಮಾನವುಳ್ಳ, ತಿಳಿವಳಿಕೆಯುಳ್ಳ ವಿಚಾರವಂತರನ್ನು ಅವಲಂಬಿಸಿದೆ. ಹೀಗೆ ವಿಚಾರವಂತರನ್ನು ಪ್ರಚೋದಿಸುವ, ಮತ್ತು ಅವರ ಅಭಿವ್ಯಕ್ತಿಗೆ ಅವಕಾಶಮಾಡಿಕೊಡುವ ಕಾರ್ಯವನ್ನು, ಕನ್ನಡನಾಡಿನ ಮೂರೂ ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರದ ಸಹಾಯದಿಂದ ರಚಿತವಾಗಿರುವ ಪಠ್ಯ ಪುಸ್ತಕ ಪ್ರಕಟಣ ವಿಭಾಗಗಳು ಕೈಕೊಂಡು ಈಗಾಗಲೇ ತಕ್ಕ ಪ್ರಮಾಣದ ಪಠ್ಯ ಪುಸ್ತಕಗಳನ್ನು ಪ್ರಕಟಿಸಿವೆ.

ಈ ಪಠ್ಯಪುಸ್ತಕ ಪ್ರಕಟಣ ವಿಭಾಗದ ಕಾರ್ಯವಿಧಾನ ಹೀಗಿದೆ: ಮಾನವಿಕ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಪರಿಣತರಾದವರನ್ನು, ಅದರಲ್ಲಿಯೂ ಬಹುಕಾಲ ಬೋಧಕರಾದವರನ್ನು ಆಯಾ ವಿಷಯಗಳನ್ನು ಕುರಿತು ಪಠ್ಯಪುಸ್ತಕವನ್ನು ಬರೆಯಲು ಕೇಳಿಕೊಳ್ಳಲಾಗುತ್ತದೆ. ಹಾಗೆ ರಚಿತವಾದ ಪಠ್ಯಪುಸ್ತಕಗಳ ಹಸ್ತಪ್ರತಿಗಳನ್ನು ಭಾಷಾ ತಜ್ಞರ ಪರಿಶೀಲನೆಗೆ ಒಳಪಡಿಸಿ ಆ ಪಠ್ಯ ವಿಷಯದ ಭಾಷೆಯ ನಿರ್ದುಷ್ಟತೆಯನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಅನಂತರ ಅದು ಸೊಗಸಾದ ರೀತಿಯಲ್ಲಿ ಅಚ್ಚಾಗಿ ಬಂದು ವಿದ್ಯಾರ್ಥಿಗಳ ಅವಶ್ಯಕತೆಗೆ ಒದಗುತ್ತದೆ. ಇಂಥ ಪಠ್ಯಪುಸ್ತಕಗಳು ಮೂಲತಃ ಆಯಾ ವಿಷಯಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನುದ್ದೇಶಿಸಿ ರಚಿತವಾಗಿದ್ದರೂ ಅವು ಆಯಾ ವಿಷಯಗಳಲ್ಲಿ ಆಸಕ್ತಿಯುಳ್ಳ ಇತರರಿಗೂ ಉಪಯೋಗವಾಗಬೇಕೆನ್ನುವ ದೃಷ್ಟಿಯಿಂದ ಹೊರತಾಗಿರುವುದಿಲ್ಲ.

ಈಗ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಐಚ್ಛಿಕ ಮಾಧ್ಯಮವಾಗಿದೆ. ವರ್ಷದಿಂದ ವರ್ಷಕ್ಕೆ ಈ ಐಚ್ಛಿಕ ಮಾಧ್ಯಮವು ಸಾರ್ವತ್ರಿಕ ಮಾಧ್ಯಮವಾಗುವ ಸೂಚನೆಗಳು ಕಂಡುಬರುತ್ತಿವೆ. ಇದಕ್ಕಾಗಿ ಇನ್ನೂ ಹೆಚ್ಚು ಹೆಚ್ಚಾಗಿ ಪಠ್ಯಪುಸ್ತಕಗಳು ಬರಬೇಕಾಗಿದೆ. ಈ ದಿಕ್ಕಿನಲ್ಲಿ ಒಂದೊಂದು ವಿಷಯದಲ್ಲೂ ತೀವ್ರಗತಿಯಿಂದ ಬೆಳೆಯು ತ್ತಿರುವ ಸಮಕಾಲೀನ ವೈಚಾರಿಕ ಪ್ರಗತಿಯನ್ನು ಸಂಗ್ರಹಿಸಿ, ಸ್ವಭಾಷಾ ಮಾಧ್ಯಮದಲ್ಲಿ ನಿರೂಪಿಸುವ ಸವಾಲನ್ನು ನಾವು ಎದುರಿಸಬೇಕಾಗಿದೆ.

ಈ ಮಹಾಕಾರ್ಯದಲ್ಲಿ ಈ ಯೋಜನೆಗೆ ಬೆಂಬಲವಾಗಿ, ಕನ್ನಡ ಪಠ್ಯಪುಸ್ತಕ ಪ್ರಕಟಣ ವಿಭಾಗಕ್ಕೆ ಎಲ್ಲ ರೀತಿಯ ಪ್ರೋತ್ಸಾಹವನ್ನು ನೀಡುತ್ತಿರುವ, ಪ್ರಕಟವಾಗು ತ್ತಿರುವ, ಪುಸ್ತಕಗಳಿಗೆ ಮುನ್ನುಡಿ ಬರೆದು ಹರಸುತ್ತಿರುವ ಬೆಂಗಳೂರು ವಿಶ್ವ ವಿದ್ಯಾಲಯದ ಮಾನ್ಯ ಉಪಕುಲಪತಿಗಳಿಗೆ, ಇನ್ನೆಲ್ಲ ಸಹಾಯ ಸಹಕಾರಗಳನ್ನು ನೀಡು ತ್ತಿರುವ ರಿಜಿಸ್ಟ್ರಾರ್ ಅವರಿಗೆ ನಮ್ಮ ವಂದನೆಗಳು.

ಈ ಪುಸ್ತಕವನ್ನು ಬರೆದುಕೊಟ್ಟು ನಮ್ಮೊಡನೆ ಸಹಕರಿಸುತ್ತಿರುವ ಶ್ರೀ ಜಿ. ಟಿ. ನಾರಾಯಣರಾವ್ ಅವರಿಗೂ ನಾವು ಕೃತಜ್ಞರು. ಈ ಸಂದರ್ಭದಲ್ಲಿ ದಿವಂಗತ ಪ್ರೊ. ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುವುದು ನಮ್ಮ ಕರ್ತವ್ಯ. ಈ ಪುಸ್ತಕ ಮುದ್ರಣ ಕಾರ್ಯದಲ್ಲಿ ನೆರವಾದ ಈಸ್ಟರ್ನ್ ಪ್ರೆಸ್ಸಿನ ಶ್ರೀ ಎಂ. ಎಸ್. ಚಿಂತಾಮಣಿ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗದ ಉಪನಿರ್ದೇಶಕರಾಗಿ, ಅತ್ಯಂತ ಉತ್ಸಾಹದಿಂದ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಶ್ರೀ ಕೆ. ಸಿ. ಶಿವಪ್ಪನವರಿಗೆ ನಮ್ಮ ಅಭಿನಂದನೆಗಳು.

ಜಿ. ಎಸ್. ಶಿವರುದ್ರಪ್ಪ
ಅಧ್ಯಕ್ಷರು
ಕನ್ನಡ ಪಠ್ಯಪುಸ್ತಕ ಸಮಿತಿ

PREFACE

The present text book is a sequel to the book **Beejarekha Ganitha Mattu Trikonamithy** written by me in Kannada and published by the Bangalore University (1968). That book was to cover a portion of the first year degree syllabus in Mathematics as prescribed by the Bangalore University in 1966-67. The present volume covers the Geometry syllabus of the second year degree class. It is hoped that the across-the-page presentation of the matter in English and Kannada will be found useful by the readers.

Professor F. J. Noronha, Head of the Department of Mathematics, Bangalore University and Dr. R. S. Mugali, the then Chairman of the Kannada Text Book Committee of the Bangalore University asked Dr. C. N. Srinivasiengar and me to prepare this volume (1968). We completed the manuscript in 1969. The discerning reader will certainly notice the master-mind of Dr. C. N. Srinivasiengar running through the entire book. We miss him very much today. But his contributions in various fields of learning will stand as eloquent tributes to his single-minded devotion to the cause of learning.

I am grateful to Professor F. J. Noronha and Dr. R. S. Mugali for the honour they have bestowed on us, the authors of this book. Sri K. C. Shivappa has pursued the printing and publication of this book with great imagination and initiative. I thank him and the Department of Publications of the Bangalore University for their kind help. The Eastern Press have done a very neat job in printing this Mathematics book. I am indebted to them.

"Athree", VIII Cross
Saraswathipuram
Mysore-570009
1 January 1974

G. T. NARAYANA RAO

Contents

ಪರಿವಿಡಿ

GEOMETRY

ಜ್ಯಾಮಿತಿ

CHAPTER I

GENERAL CONIC

1.1 Resume. A conic is defined as the locus of a point P which moves such that its distance from a fixed point S bears a constant ratio $e:1$ to its distance from a fixed line l. S is called the focus, l the directrix and e the eccentricity. The shape of the conic varies according to the values of e. When $e<1$ it is a closed curve called the ellipse; when $e=1$ the curve opens out to infinity—it is a parabola; and when $e>1$ the curve has two branches both opening out to infinity—it is a hyperbola. Ellipse and hyperbola have finite centres; they are called the central conics. The centre of the parabola is at infinity. The parabola may be viewed as the limiting case of the ellipse when the latter's centre recedes to infinity. The general equation of a conic is $F \equiv ax^2+2hxy+by^2+2gx+2fy+c=0$. It is the general equation of the second degree in x and y.

1.2 Summary. A summary of the more important formulae relating to the conics is given here below :

$$F \equiv ax^2+2hxy+by^2+2gx+2fy+c$$

$$F_1 \equiv axx_1+h(xy_1+x_1y)+byy_1+g(x+x_1)+f(y+y_1)+c$$

$$\equiv \tfrac{1}{2}\left(x\frac{\partial F}{\partial x_1}+y\frac{\partial F}{\partial y_1}+\frac{\partial F}{\partial \omega_1}\right)$$

$$\equiv \tfrac{1}{2}\left(x_1\frac{\partial F}{\partial x}+y_1\frac{\partial F}{\partial y}+\frac{\partial F}{\partial \omega}\right)$$

$$F_{11} \equiv ax_1^2+2hx_1y_1+by_1^2+2gx_1+2fy_1+c$$

$$F_{12} \equiv F_{21} \equiv ax_1x_2+h(x_1y_2+x_2y_1)+by_1y_2+g(x_1+x_2) + f(y_1+y_2)+c$$

ಅಧ್ಯಾಯ ೧

ಶಂಕುಜದ ಸಾಮಾನ್ಯರೂಪ

೧.೧ ಪುನರವಲೋಕನ

ಸ್ಥಿರ ಬಿಂದು S ಮತ್ತು ಸ್ಥಿರ ಸರಳರೇಖೆ l ಇವುಗಳಿಂದ ಒಂದು ಚರಬಿಂದು P ಯ ದೂರಗಳ ನಿಷ್ಪತ್ತಿ $e : 1$ ಎಂಬ ಸ್ಥಿರಸಂಖ್ಯೆಯಾದರೆ P ಯ ಪಥ ಒಂದು ಶಂಕುಜ ಎಂದು ವ್ಯಾಖ್ಯಿಸುತ್ತೇವೆ. S ಅದರ ನಾಭಿ, l ಚಾಲಕ ಮತ್ತು e ಉತ್ಕೇಂದ್ರತೆ. e ಯ ಬೆಲೆಗಳನ್ನು ಹೊಂದಿ ಶಂಕುಜದ ಆಕಾರ ಬದಲಾಗುತ್ತದೆ. $e < 1$ ಆಗಿರುವಾಗ ದೀರ್ಘವೃತ್ತ ಹೆಸರಿನ ಮುಚ್ಚಿರುವ ವಕ್ರರೇಖೆಯೂ, $e = 1$ ಆಗಿರುವಾಗ ಅನಂತಕ್ಕೆ ತೆರೆದುಕೊಂಡಿರುವ ಪ್ಯರಾಬೋಲವೂ, $e > 1$ ಆಗಿರುವಾಗ ಎರಡು ಅನಂತವ್ಯಾಪೀ ಶಾಖೆಗಳಿರುವ ಹೈಪರ್ಬೋಲವೂ ಲಭಿಸುತ್ತವೆ. ದೀರ್ಘವೃತ್ತ ಮತ್ತು ಹೈಪರ್ಬೋಲಗಳಿಗೆ ಪರ್ಯಾಪ್ತ ಕೇಂದ್ರಗಳಿವೆ. ಆದ್ದರಿಂದ ಇವು ಕೇಂದ್ರೀಯ ಶಂಕುಜಗಳು. ಪ್ಯರಾಬೋಲದ ಕೇಂದ್ರ ಅನಂತದಲ್ಲಿದೆ. ದೀರ್ಘವೃತ್ತದ ಕೇಂದ್ರ ಅನಂತವನ್ನು ಸಮೀಪಿಸಿದಾಗ ಆ ಶಂಕುಜದ ಮಿತಿ ಪ್ಯರಾಬೋಲ ಎಂದು ಪರಿಗಣಿಸಬಹುದು. ಶಂಕುಜದ ಸಾಮಾನ್ಯ ಸಮೀಕರಣ $F \equiv ax^2+2hxy+by^2+2gx+2fy+c=0$. ಇದು x ಮತ್ತು y ಗಳಲ್ಲಿ ಎರಡನೆಯ ಘಾತದ ಸಾಮಾನ್ಯ ಸಮೀಕರಣ.

೧.೨ ಸಾರಾಂಶ

ಶಂಕುಜಗಳಿಗೆ ಅನ್ವಯಿಸುವ ಕೆಲವು ಪ್ರಮುಖ ಸೂತ್ರಗಳ ಸಾರಾಂಶ ಇಲ್ಲಿ ಕೊಡಲಾಗಿದೆ :

$$F \equiv ax^2+2hxy+by^2+2gx+2fy+c$$

$$F_1 \equiv axx_1+h(xy_1+x_1y)+byy_1+g(x+x_1)+f(y+y_1)+c$$

$$\equiv \tfrac{1}{2}\left(x\frac{\partial F}{\partial x_1}+y\frac{\partial F}{\partial y_1}+\frac{\partial F}{\partial \omega_1}\right)$$

$$\equiv \tfrac{1}{2}\left(x_1\frac{\partial F}{\partial x}+y_1\frac{\partial F}{\partial y}+\frac{\partial F}{\partial \omega}\right)$$

$$F_{11} \equiv ax_1^2+2hx_1y_1+by_1^2+2gx_1+2fy_1+c$$

$$F_{12} \equiv F_{21} \equiv ax_1x_2+h(x_1y_2+x_2y_1)+by_1y_2 +g(x_1+x_2)+f(y_1+y_2)+c$$

F = 0 represents

(i) a pair of straight lines if

$$\Delta \equiv abc + 2fgh - af^2 - bg^2 - ch^2$$

$$\equiv \begin{vmatrix} a & h & g \\ h & b & f \\ g & f & c \end{vmatrix} = 0$$

(ii) a circle if $a = b$, $h = 0$

(iii) an ellipse, a parabola, a hyperbola according as $ab - h^2 \gtreqless$ or < 0.

Polar of the point (x_1, y_1) w.r.t. $F=0$; chord of contact of tangents from (x_1, y_1) to $F = 0$; tangent at (x_1, y_1) on $F=0$ all have the same equation $F_1 = 0$

Pair of tangents from (x_1, y_1) to $F=0$ has the combined equation $FF_{11} = F_1{}^2$.

Chord whose midpoint is (x_1, y_1) is $F_1 = F_{11}$.

Chord joining (x_1, y_1), (x_2, y_2) on $F=0$ is $F_1 + F_2 = F_{12}$.

Standard equations to conics;

Ellipse $\dfrac{x^2}{a^2} + \dfrac{y^2}{b^2} = 1$, $b^2 = a^2(1-e^2)$, $e < 1$.

Foci $(\pm ae, 0)$. Corresponding directrices $x = \pm \dfrac{a}{e}$

Parabola $y^2 = 4ax$, $e = 1$

Focus $(a, 0)$. Directrix $x = -a$

Hyperbola $\dfrac{x^2}{a^2} - \dfrac{y^2}{b^2} = 1$, $b^2 = a^2(e^2-1)$, $e = > 1$

Foci, directrices as for ellipse.

Rectangular hyperbola $xy = c^2$ or $x^2 - y^2 = a^2$

Asymptotes of $F=0$, $F - \dfrac{\Delta}{ab - h^2} = 0$

Director circle of ellipse $x^2 + y^2 = a^2 + b^2$

Director circle of the hyperbola $x^2 + y^2 = a^2 - b^2$

$F = 0$ ಸೂಚಿಸುವ ಪಥ

(1) $$\Delta \equiv abc + 2fgh - af^2 - bg^2 - ch^2 \equiv \begin{vmatrix} a & h & g \\ h & b & f \\ g & f & c \end{vmatrix} = 0$$

ಆಗಿರುವಾಗ ಒಂದು ಜೊತೆ ಸರಳರೇಖೆಗಳು.

(2) $a = b,\ h = 0$ ಆಗಿರುವಾಗ ಒಂದು ವೃತ್ತ.

(3) $ab - h^2 \geqq$ ಅಥವಾ < 0 ಒಂದು ದೀರ್ಘ ವೃತ್ತ, ಪ್ಯರಾಬೊಲ ಅಥವಾ ಹೈಪರ್ಬೋಲ.

$F = 0$ ಯನ್ನು ಕುರಿತು (x_1, y_1) ಬಿಂದುವಿನ ಧ್ರುವೀಯ ; (x_1, y_1) ಬಿಂದುವಿನ ಸ್ಪರ್ಶಕಜ್ಯಾ ; $F = 0$ ಯ ಮೇಲಿರುವ (x_1, y_1) ಬಿಂದುವಿನಲ್ಲಿ ಎಳೆದ ಸ್ಪರ್ಶಕ ಎಲ್ಲವುಗಳ ಸಮೀಕರಣ $F_1 = 0$.

(x_1, y_1) ಬಿಂದುವಿನಿಂದ $F = 0$ ಗೆ ಎಳೆದ ಒಂದು ಜೊತೆ ಸ್ಪರ್ಶಕಗಳ ಒಟ್ಟು ಸಮೀಕರಣ $FF_{11} = F_1^2$.

(x_1, y_1) ಮಧ್ಯಬಿಂದು ಆಗಿರುವ ಜ್ಯಾ $F_1 = F_{11}$.

$F = 0$ ಮೇಲಿರುವ (x_1, y_1), (x_2, y_2) ಬಿಂದುಗಳನ್ನು ಜೋಡಿಸುವ ಜ್ಯಾ $F_1 + F_2 = F_{12}$.

ಶಂಕುಜಗಳ ಶಿಷ್ಟ ಸಮೀಕರಣಗಳು—

ದೀರ್ಘವೃತ್ತ : $\frac{x^2}{a^2} + \frac{y^2}{b^2} = 1,\ b^2 = a^2(1 - e^2),\ e < 1.$

ನಾಭಿಗಳು $(\pm ae, 0)$, ಅನುರೂಪ ಚಾಲಕಗಳು $x = \pm \frac{a}{e}$

ಪ್ಯರಾಬೊಲ : $y^2 = 4ax,\ e = 1$, ನಾಭಿ $(a, 0)$, ಚಾಲಕ $x = -a$

ಹೈಪರ್ಬೋಲ : $\frac{x^2}{a^2} - \frac{y^2}{b^2} = 1,\ b^2 = a^2(e^2 - 1),\ e > 1$ ನಾಭಿಗಳು, ಚಾಲಕಗಳು ದೀರ್ಘವೃತ್ತದಂತೆ.

ಲಂಬೀಯ ಹೈಪರ್ಬೋಲ : $xy = c^2$ ಅಥವಾ $x^2 - y^2 = a^2$

$F = 0$ ಯ ಅನಂತ ಸ್ಪರ್ಶಕಗಳು : $F - \frac{\Delta}{ab - h^2} = 0$

ದೀರ್ಘವೃತ್ತದ ಚಾಲಕವೃತ್ತ : $x^2 + y^2 = a^2 + b^2$

ಹೈಪರ್ಬೋಲದ ಚಾಲಕವೃತ್ತ ; $x^2 + y^2 = a^2 - b^2$

1.3 Condition that the line $lx+my+n=0$ may touch the conic $F=0$.

Let the point of contact be $P(x_1, y_1)$. Then the tangent at P is

$$x(ax_1+hy_1+g)+y(hx_1+by_1+f)+gx_1+fy_1+c=0$$

This is identical with $lx+my+n=0$

$$\therefore \quad \frac{ax_1+hy_1+g}{l}=\frac{hx_1+by_1+f}{m}=\frac{gx_1+fy_1+c}{n}=\lambda$$

$$\begin{aligned} \therefore \quad ax_1+hy_1+g-l\lambda &= 0 \\ hx_1+by_1+f-m\lambda &= 0 \\ gx_1+fy_1+c-n\lambda &= 0 \\ \text{Also} \quad lx_1+my_1+n &= 0 \end{aligned}$$

Eliminating x_1, y_1, λ we obtain the required condition

$$\begin{vmatrix} a & h & g & l \\ h & b & f & m \\ g & f & c & n \\ l & m & n & 0 \end{vmatrix}$$

Expanding we obtain

$Al^2+Bm^2+Cn^2+2Fmn+2Gnl+2Hlm=0$, where A, B, C, F, G, H are the co-factors of the corresponding small letters in the determinant

$$\begin{vmatrix} a & h & g \\ h & b & f \\ g & f & c \end{vmatrix}$$

Corollary: Through any point we can draw two tangents to the conic. For, solving between

$$Al^2+Bm^2+Cn^2+2Fmn+2Gnl+2Hlm=0$$

$$lx_1+my_1+n=0$$

we obtain two solutions (real or otherwise) for $l:m:n$.

1.4 Homogeneous co-ordinates: Consider the two straight lines

$$L_1 \equiv l_1x+m_1y+n_1 = 0$$
$$L_2 \equiv l_2x+m_2y+n_2 = 0$$

೧.೩ $lx + my + n = 0$ ಸರಳರೇಖೆ $F = 0$ಯನ್ನು ಸ್ಪರ್ಶಿಸಲು ನಿಯಮ

ಸ್ಪರ್ಶಬಿಂದು $P(x_1, y_1)$ ಆಗಿರಲಿ. P ಯಲ್ಲಿ ಸ್ಪರ್ಶಕದ ಸಮೀಕರಣ

$$x(ax_1 + hy_1 + g) + y(hx_1 + by_1 + f) + gx_1 + fy_1 + c = 0$$

ಇದೂ $lx + my + n = 0$ ಸರ್ವಸಮವಾಗಿರಬೇಕು.

$$\therefore \quad \frac{ax_1 + hy_1 + g}{l} = \frac{hx_1 + by_1 + f}{m} = \frac{gx_1 + fy_1 + c}{n} = \lambda$$

$$\therefore \quad ax_1 + hy_1 + g - l\lambda = 0$$

$$hx_1 + by_1 + f - m\lambda = 0$$

$$gx_1 + fy_1 + c - n\lambda = 0$$

ಮತ್ತು $lx_1 + my_1 + n = 0$

x_1, y_1, λ ಗಳನ್ನು ವಿಸರ್ಜಿಸಿದರೆ ಬೇಕಾದ ನಿಯಮ ದೊರೆಯುತ್ತದೆ. ಅದು

$$\begin{vmatrix} a & h & g & l \\ h & b & f & m \\ g & f & c & n \\ l & m & n & 0 \end{vmatrix}$$

ಇದನ್ನು ವಿಸ್ತರಿಸಿದರೆ

$$Al^2 + Bm^2 + Cn^2 + 2\,Fmn + 2\,Gnl + 2\,Hlm = 0.$$ ಇಲ್ಲಿ

A, B, C, F, G, H ಗಳು

$$\begin{vmatrix} a & h & g \\ h & b & f \\ g & f & c \end{vmatrix}$$

ನಿರ್ಧಾರಕದಲ್ಲಿ ಆಯಾ ಅಕ್ಷರಗಳ ಸಹಾಪವರ್ತನಗಳು.

ಅನುಮಿತ : ಒಂದು ಬಿಂದುವಿನಿಂದ ಎರಡು ಸ್ಪರ್ಶಕಗಳನ್ನು ಶಂಕುಜಕ್ಕೆ ಎಳೆಯಬಹುದು.

$$Al^2 + Bm^2 + Cn^2 + 2\,Fmn + 2\,Gnl + 2\,Hlm = 0$$

$$lx_1 + my_1 + n = 0$$

ಸಮೀಕರಣಗಳನ್ನು ಬಿಡಿಸಿದಾಗ $l:m:n$ ನಿಷ್ಪತ್ತಿಗಳಿಗೆ ಎರಡು (ವಾಸ್ತವ ಅಥವಾ ಊಹ್ಯ) ಬಿಡಿಸಿಕೆಗಳು ದೊರೆಯುತ್ತವೆ.

೧.೪ ಸಮಾನ ಘಾತೀಯ ನಿರ್ದೇಶಕಗಳು

$$L_1 \equiv l_1x + m_1y + n_1 = 0$$

$$L_2 \equiv l_2x + m_2y + n_2 = 0$$ ಎಂಬ ಎರಡು ಸರಳ ರೇಖೆಗಳನ್ನು ಪರಿಶೀಲಿಸಿ. ಅವುಗಳ ಸಾಮಾನ್ಯ ಅಥವಾ ಛೇದನ ಬಿಂದು

Their common point or point of intersection is

$$\left(\frac{m_1n_2-m_2n_1}{l_1m_2-l_2m_1},\ \frac{n_1l_2-n_2l_1}{l_1m_2-l_2m_1}\right)$$

provided $l_1m_2-l_2m_1 \neq 0$. If $l_1m_2-l_2m_1=0$, then there is no finite point of intersection. In this case we have

$$\frac{l_1}{m_1} = \frac{l_2}{m_2}$$

which shows that the two straight lines are parallel—that is, they have a common direction. We may therefore conclude that two coplanar straight lines have either a common point or a common direction. When they have both, the straight lines coincide and when they have neither, they cease to be coplanar.

Let us now transform the current co-ordinates (x, y) to a new system by writing $x=\frac{X}{Z}$, $y=\frac{Y}{Z}$. Without loss of generality we may assume that X, Z and Y, Z are prime to one another, i.e., $(X, Z)=(Y, Z)=1$. We further assume that $Z\neq 0$. $L_1=0$, $L_2=0$ now become

$$l_1X+m_1Y+n_1Z=0$$
$$l_2X+m_2Y+n_2Z=0$$

These are homogeneous equations in three variables X, Y, Z. The common point of these lines is given by

$(X, Y, Z) \equiv (m_1n_2-m_2n_1,\ n_1l_2-n_2l_1,\ l_1m_2-l_2m_1)$ or any multiple of these.

When the two lines are parallel we have $l_1m_2-l_2m_1=0$ or $Z=0$. If we now remove the restriction $Z\neq 0$ we can at once deal with the points at infinity in an algebraic way as if they are ordinary points. The points at infinity are (X, Y, Z) corresponding to $Z=0$ or simply $(X, Y, 0)$.

The foregoing argument enables us to determine the points at infinity on a curve in an algebraic way. First homogenise the equation by the substitutions $x=\frac{X}{Z}$, $y=\frac{Y}{Z}$. After clearing the denominators put $Z=0$. The resulting equation in X and Y gives the points at infinity on the curve. In effect this amounts

$$\left(\frac{m_1 n_2 - m_2 n_1}{l_1 m_2 - l_2 m_1}, \quad \frac{n_1 l_2 - n_2 l_1}{l_1 m_2 - l_2 m_1}\right)$$

$l_1 m_2 - l_2 m_1 \neq 0$. $l_1 m_2 - l_2 m_1 = 0$ ಆದಾಗ ಪರ್ಯಾಪ್ತ ಛೇದನ ಬಿಂದು ಇರುವುದಿಲ್ಲ. ಈ ಸಂದರ್ಭದಲ್ಲಿ $\frac{l_1}{m_1} = \frac{l_2}{m_2}$. ಆದ್ದರಿಂದ ಸರಳರೇಖೆಗಳು ಸಮಾನಾಂತರವಾಗಿವೆ. ಅಂದರೆ ಅವುಗಳಿಗೆ ಒಂದು ಸಾಮಾನ್ಯ ದಿಶೆಯಿದೆ. ಆದ್ದರಿಂದ ಎರಡು ಸಮತಲೀಯ ಸರಳರೇಖೆಗಳಿಗೆ ಒಂದೋ ಸಾಮಾನ್ಯ ಬಿಂದುವಿದೆ ಅಥವಾ ಸಾಮಾನ್ಯ ದಿಶೆಯಿದೆ. ಅವುಗಳಿಗೆ ಇವೆರಡೂ ಇದ್ದರೆ ಆ ರೇಖೆಗಳು ಐಕ್ಯವಾಗುತ್ತವೆ; ಯಾವುದೂ ಇಲ್ಲವಾದಾಗ ಅವು ಸಮತಲೀಯವಾಗಿ ಇರುವುದಿಲ್ಲ.

ವಿನಿಮಯ ನಿರ್ದೇಶಕಗಳಾದ (x, y) ನ್ನು $x = \frac{X}{Z}$, $y = \frac{Y}{Z}$ ಎಂದು ಬರೆದು ಒಂದು ಹೊಸ ವ್ಯವಸ್ಥೆಗೆ ಪರಿವರ್ತಿಸೋಣ. ಸಾಮಾನ್ಯತೆಗೆ ಭಂಗ ಬರದಂತೆ X, Z ಮತ್ತು Y, Z ಗಳು ಪರಸ್ಪರ ಮೂಲ ಸಂಖ್ಯೆಗಳಾಗಿವೆ, ಅಂದರೆ $(X, Z) = (Y, Z) = 1$ ಎಂದು ಊಹಿಸಬಹುದು. $Z \neq 0$ ಎಂದೂ ಊಹಿಸುತ್ತೇವೆ. $L_1 = 0$, $L_2 = 0$ ಈಗ

$$l_1 X + m_1 Y + n_1 Z = 0$$
$$l_2 X + m_2 Y + n_2 Z = 0$$

ಆಗುವುವು. ಇವು X, Y, Z ಗಳಲ್ಲಿ ಸಮಾನಘಾತೀಯ ಸಮೀಕರಣಗಳು. ಇವುಗಳ ಸಾಮಾನ್ಯ ಬಿಂದು $(X, Y, Z) \equiv (m_1 n_2 - m_2 n_1, n_1 l_2 - n_2 l_1, l_1 m_2 - l_2 m_1)$ ಅಥವಾ ಇವುಗಳ ಅಪವರ್ತ್ಯಗಳು.

ಈ ಎರಡು ಸರಳರೇಖೆಗಳು ಸಮಾನಾಂತರವಾಗಿರುವಾಗ $l_1 m_2 - l_2 m_1 = 0$ ಅಥವಾ $Z = 0$. $Z \neq 0$ ಎಂಬ ನಿರ್ಬಂಧವನ್ನು ತೆಗೆದರೆ ಅನಂತದಲ್ಲಿರುವ ಬಿಂದುಗಳನ್ನು ಸಾಮಾನ್ಯ ಬಿಂದುಗಳೇ ಎನ್ನುವಂತೆ ಬೈಜಿಕವಾಗಿ ವಿಶ್ಲೇಷಿಸಬಹುದು. (X, Y, Z), $Z = 0$ ಅನಂತ ಬಿಂದುಗಳು. ಅಥವಾ $(X, Y, 0)$.

ಒಂದು ವಕ್ರರೇಖೆಯ ಮೇಲಿರುವ ಅನಂತ ಬಿಂದುಗಳನ್ನು ಬೈಜಿಕವಾಗಿ ನಿರ್ಧರಿಸಲು ಮೇಲಿನ ವಾದ ಸಹಾಯಕವಾಗಿದೆ. ಮೊದಲು. $x = \frac{X}{Z}$, $y = \frac{Y}{Z}$ ಎಂದು ಆದೇಶಿಸಿ ವಕ್ರರೇಖೆಯ ಸಮೀಕರಣವನ್ನು ಸಮಾನಘಾತಿಸಬೇಕು. ಛೇದಗಳನ್ನು ತೆಗೆದ ಅನಂತರ $Z = 0$ ಎಂದು ಬರೆಯಬೇಕು. X, Y ನಲ್ಲಿ ದೊರೆಯುವ ಸಮೀಕರಣ ವಕ್ರರೇಖೆಯ ಮೇಲಿರುವ ಅನಂತ ಬಿಂದುಗಳನ್ನು ನೀಡುವುದು. ಸಮೀ

to equating the highest degree terms in X and Y in the equation to zero.

The line at infinity is the locus of all points at infinity in the plane. Its equation is $Z=0$ or $1=0$.

Consider the two parallel straight lines $y=mx+c_1$, $y=mx+c_2$. Simultaneous solving between the two equations indicates that the common point recedes to infinity. Now

$$(mx-y+c_1)-(mx-y+c_2)=0$$

represents a straight line passing through the common point of the straight lines. But it is $c_1-c_2=0$ or $1=0$, which is the line at infinity. We may therefore say that parallel lines have a common point at infinity.

1.5 Points at infinity on the circle and the conics.

The points at infinity on the circle $x^2+y^2+2gx+2fy+c=0$ ... (1)

are given by

$$x^2+y^2+2\,gxZ+2\,fyZ+cZ^2=0,\ Z=0$$

$$\text{or}\quad x^2+y^2=0$$

$$\therefore\qquad x=\pm iy$$

We take $x=1$, $y=\pm i$. Therefore the circle (1) intersects the line at infinity $Z=0$ in two points $(1, \pm i, 0)$. Let C be the centre of the circle and these points $\omega\ (1, i, 0)$ and $\omega'\ (1, -i, 0)$. Now $C\omega$ and $C\omega'$ are imaginary lines. The co-ordinates of ω and ω' are independent of g, f, c which determine the size and position of the circle. We infer that all circles pass through the same two points on the line at infinity. These points ω and ω' are called circular points at infinity.

Let the conic $F=0$ pass through the circular points at infinity. Then $(1, \pm i, 0)$ lie on

$$ax^2+2hxy+by^2+2gZx+2fyZ+cZ^2=0$$

$$\therefore\quad a\pm 2ih-b=0$$

ಕರಣದಲ್ಲಿರುವ X ಮತ್ತು Y ಗಳಲ್ಲಿ ಗರಿಷ್ಠಘಾತದ ಪದಗಳ ಭಾಗವನ್ನು ಸೊನ್ನೆಗೆ ಸಮೀಕರಿಸುವುದು ಇದರ ಪರಿಣಾಮ.

ಸಮತಲದ ಮೇಲೆ ಅನಂತದಲ್ಲಿರುವ ಎಲ್ಲ ಬಿಂದುಗಳ ಪಥದ ಹೆಸರು ಅನಂತ ರೇಖೆ. ಇದರ ಸಮೀಕರಣ $Z=0$ ಅಥವಾ $1=0$.

$y=mx+c_1$, $y=mx+c_2$ ಎಂಬ ಎರಡು ಸಮಾನಾಂತರ ಸರಳರೇಖೆಗಳನ್ನು ಪರಿಶೀಲಿಸಿ. ಅವುಗಳ ಸಾಮಾನ್ಯ ಬಿಂದು ಅನಂತಕ್ಕೆ ನಿರ್ಗಮಿಸುತ್ತಿದೆ ಎಂದು ಸಮೀಕರಣಗಳ ಏಕಕಾಲಿಕ ಬಿಡಿಸಿಕೆಯಿಂದ ತಿಳಿಯುತ್ತೇವೆ. ಈಗ

$(mx-y+c_1)-(mx-y+c_2)=0$ ಅವೆರಡು ಸರಳರೇಖೆಗಳ ಸಾಮಾನ್ಯ ಬಿಂದುವಿನ ಮೂಲಕ ಸಾಗುವ ಒಂದು ಸರಳ ರೇಖೆಯನ್ನು ಸೂಚಿಸುತ್ತದೆ. ಆದರೆ ಇದು $c_1-c_2=0$ ಅಥವಾ $1=0$. ಇದು ಅನಂತರೇಖೆ. ಆದ್ದರಿಂದ ಸಮಾನಾಂತರ ಸರಳರೇಖೆಗಳ ಸಾಮಾನ್ಯಬಿಂದು ಅನಂತದಲ್ಲಿದೆ ಎಂದು ಹೇಳಬಹುದು.

೧.೫ ವೃತ್ತ ಮತ್ತು ಶಂಕುಜಗಳ ಮೇಲಿನ ಅನಂತ ಬಿಂದುಗಳು

$$x^2+y^2+2gx+2fy+c=0 \qquad \cdots \quad (1)$$

ವೃತ್ತದ ಮೇಲಿನ ಅನಂತ ಬಿಂದುಗಳನ್ನು

$$x^2+y^2+2gxZ+2fyZ+cZ^2=0,\ Z=0$$

ಅಥವಾ $x^2+y^2=0$ ಕೊಡುತ್ತವೆ.

$$\therefore \quad x=\pm i\,y$$

$x=1$, $y=\pm i$ ಎಂದು ಆರಿಸುತ್ತೇವೆ. ಆದ್ದರಿಂದ ವೃತ್ತ (1) ಅನಂತರೇಖೆ $Z=0$ ಯನ್ನು $(1, \pm i, 0)$ ಎಂಬ ಎರಡು ಬಿಂದುಗಳಲ್ಲಿ ಛೇದಿಸುತ್ತದೆ. ವೃತ್ತದ ಕೇಂದ್ರ C ಆಗಿರಲಿ ಮತ್ತು ಈ ಬಿಂದುಗಳು $\omega\ (1, i, 0)$, $\omega'\ (1, -i, 0)$ ಆಗಿರಲಿ. $C\omega$, $C\omega'$ ಶೂನ್ಯ ರೇಖೆಗಳು. ω, ω' ಬಿಂದುಗಳ ನಿರ್ದೇಶಕಗಳು ವೃತ್ತದ ಸ್ಥಾನ ಮತ್ತು ಗಾತ್ರಗಳನ್ನು ನಿರ್ಧರಿಸುವ g, f, c ಗಳನ್ನು ಅವಲಂಬಿಸಿರುವುದಿಲ್ಲ. ಆದ್ದರಿಂದ ಎಲ್ಲ ವೃತ್ತಗಳೂ ಅನಂತ ರೇಖೆಯ ಮೇಲಿರುವ ಒಂದು ಜೊತೆ ಸ್ಥಿರ ಬಿಂದುಗಳ ಮೂಲಕ ಸಾಗುವುವು ಎಂದು ತೀರ್ಮಾನಿಸುತ್ತೇವೆ. ω, ω' ಎಂಬ ಈ ಎರಡು ಬಿಂದುಗಳನ್ನು ಅನಂತವೃತ್ತೀಯ ಬಿಂದುಗಳು ಎಂದು ಕರೆಯುತ್ತೇವೆ.

$F=0$ ಶಂಕುಜ ಅನಂತವೃತ್ತೀಯ ಬಿಂದುಗಳ ಮೂಲಕ ಸಾಗಲಿ. ಆಗ $(1, \pm i, 0)$ ಬಿಂದುಗಳು

$$ax^2+2hxy+by^2+2gZx+2fyZ+cZ^2=0$$ ಯ ಮೇಲೆ ಇವೆ.

$$\therefore \quad a\pm 2ih-b=0$$

$$\therefore \quad a-b=0, \quad h=0$$

$$\therefore \quad F=0 \text{ is a circle.}$$

Therefore every conic passing through the circular points at infinity is a circle.

The intersections of the conic F=0 with the line at infinity are given by

$$ax^2+2hxy+by^2+2gZx+2fyZ+cZ^2=0, \ Z=0$$

$$\text{or} \quad ax^2+2hxy+by^2=0$$

These are real and distinct; or coincident; or imaginary according as $h^2-ab \gtrless$ or <0; that is, according as the conic is a hyperbola or a parabola or an ellipse. Thus a hyperbola intersects the line at infinity in two distinct points; a parabola touches it and an ellipse cuts it in two imaginary points.

Let I and J be the points of intersection of F=0 with the line at infinity. Then $ax^2+2hxy+by^2 \equiv b\,(y-m_1x)\,(y-m_2x)=0$

$$m_1+m_2=-\frac{2h}{b}, \quad m_1m_2=\frac{a}{b}$$

give the co-ordinates of I and J. The homogeneous co-ordinates of these points are I$(1, m_1, 0)$, J$(1, m_2, 0)$. Since the co-ordinates of I and J depend upon a, b, and h these points are in general different for different conics.

1.6 Conics through five given points.

The general equation of a conic, *viz.*,

$$F \equiv ax^2+2\,hxy+by^2+2\,gx+2\,fy+c=0$$

has five independent ratios $\frac{a}{c}, \frac{b}{c}, \frac{f}{c}, \frac{g}{c}, \frac{h}{c}$ as co-efficients. Five independent linear equations in x and y are sufficient to determine these coefficients. Therefore, in general, a unique conic can be made to pass through five given points.

1.7 Conic and a straight line. The common points of F=0 and a straight line L=0 are obtained by solving between

$$\therefore \quad a-b=0, \quad h=0$$

$\therefore$ $F=0$ ಒಂದು ವೃತ್ತ.

ಆದ್ದರಿಂದ ಅನಂತವೃತ್ತೀಯ ಬಿಂದುಗಳ ಮೂಲಕ ಸಾಗುವ ಪ್ರತಿಯೊಂದು ಶಂಕುಜವೂ ವೃತ್ತವಾಗಿದೆ.

ಅನಂತರೇಖೆ $Z=0$ ಮತ್ತು ಶಂಕುಜ $F \equiv ax^2+2hxy+by^2+2gZx+2fyZ+cZ^2=0$ ಇವುಗಳ ಭೇದನ ಬಿಂದುಗಳನ್ನು $ax^2+2hxy+by^2=0$ ಕೊಡುತ್ತದೆ. ಇವು ವಾಸ್ತವ ಮತ್ತು ನಿರ್ದಿಷ್ಟ ; ಅಥವಾ ಐಕ್ಯ ; ಅಥವಾ ಊಹ್ಯ $h^2-ab \gtrless$ ಅಥವಾ <0 ಯಂತೆ, ಅಂದರೆ ಶಂಕುಜ ಹೈಪರ್ಬೋಲ ಅಥವಾ ಪ್ಯರಾಬೊಲ ಅಥವಾ ದೀರ್ಘ ವೃತ್ತವಂತೆ. ಆದ್ದರಿಂದ ಹೈಪರ್ಬೋಲ ಅನಂತರೇಖೆಯನ್ನು ಎರಡು ನಿರ್ದಿಷ್ಟ ಬಿಂದುಗಳಲ್ಲಿ ಭೇದಿಸುವುದು ; ಪ್ಯರಾಬೊಲ ಅದನ್ನು ಸ್ಪರ್ಶಿಸುವುದು ; ಮತ್ತು ದೀರ್ಘ ವೃತ್ತ ಅದನ್ನು ಎರಡು ಊಹ್ಯ ಬಿಂದುಗಳಲ್ಲಿ ಭೇದಿಸುವುದು.

ಅನಂತರೇಖೆ ಮತ್ತು $F=0$ ಗಳ ಭೇದನ ಬಿಂದುಗಳು I ಮತ್ತು J ಆಗಿರಲಿ. ಆಗ $ax^2+2hxy+by^2 \equiv b(y-m_1x)(y-m_2x)=0$

$$\therefore \quad m_1+m_2=-\frac{2h}{b}, \quad m_1m_2=\frac{a}{b}$$

ಈ ಸಮೀಕರಣದಿಂದ I ಮತ್ತು J ಗಳ ನಿರ್ದೇಶಕಗಳು ದೊರೆಯುತ್ತವೆ. ಈ ಬಿಂದುಗಳ ಸಮಾನ ಘಾತೀಯ ನಿರ್ದೇಶಕಗಳು I $(1, m_1, 0)$ ಮತ್ತು J $(1, m_2, 0)$. ಇವು a, b, h ಗಳನ್ನು ಅವಲಂಬಿಸಿವೆ. ಆದ್ದರಿಂದ I, J ಬಿಂದುಗಳು ಸಾಮಾನ್ಯವಾಗಿ ಬೇರೆ ಬೇರೆ ಶಂಕುಜಗಳಿಗೆ ಬೇರೆ ಬೇರೆ.

೧.೬ ಐದು ದತ್ತ ಬಿಂದುಗಳ ಮೂಲಕ ಸಾಗುವ ಶಂಕುಜ

ಶಂಕುಜದ ಸಾಮಾನ್ಯ ಸಮೀಕರಣ

$$F \equiv ax^2+2hxy+by^2+2gx+2fy+c=0$$

ಇದರಲ್ಲಿ $\frac{a}{c}$, $\frac{b}{c}$, $\frac{f}{c}$, $\frac{g}{c}$, $\frac{h}{c}$ ಎಂಬ ಐದು ಸ್ವತಂತ್ರ ನಿಷ್ಪತ್ತಿಗಳಿವೆ. x, y ಗಳಲ್ಲಿ ಐದು ಸ್ವತಂತ್ರ ಮತ್ತು ಸರಳ ಸಮೀಕರಣಗಳು ಇವುಗಳನ್ನು ನಿರ್ಧರಿಸಲು ಸಾಕು. ಆದ್ದರಿಂದ ಸಾಮಾನ್ಯವಾಗಿ ಐದು ದತ್ತ ಬಿಂದುಗಳ ಮೂಲಕ ಒಂದೇ ಒಂದು ಶಂಕುಜವನ್ನು ಸಾಗುವಂತೆ ಮಾಡಬಹುದು.

೧.೭ ಶಂಕುಜ ಮತ್ತು ಸರಳರೇಖೆ

ಶಂಕುಜ $F=0$ ಮತ್ತು ಸರಳರೇಖೆ $L=0$ ಇವುಗಳ ಸಾಮಾನ್ಯ ಬಿಂದುಗಳನ್ನು ಆ ಸಮೀಕರಣಗಳನ್ನು ಬಿಡಿಸುವುದರ ಮೂಲಕ ತಿಳಿಯಬಹುದು. ಒಂದು ಚರವನ್ನು

the two equations. Eliminating one of the variables we get a quadratic in the other variable. It has two roots in general. This shows that $F=0$, $L=0$ have two common points. These points may be real and distinct, coincident or imaginary. The discriminant of the quadratic determines the nature of the common points.

The equation $F+\lambda L=0$, where λ is an arbitrary constant representing a conic passing through the common points of $F=0$, $L=0$. As λ takes different values we get a system of conics having $L=0$ as their common chord.

Example: Prove that the polars of a given point with respect to a system of conics having a common chord pass through a fixed point.

The polar of any point (x_1, y_1) for the system

$F+\lambda L \equiv ax^2+2hxy+by^2+2gx+2fy+c+\lambda(lx+my+n)=0$ is $F_1+\lambda L_1=0$. Evidently this represents a system of straight lines passing through the common point of the straight lines $F_1=0$, $L_1=0$.

1.8 A pair of conics. Let $F=0$, $F'=0$ be two conics. Eliminating any one of the variables between them we get a quartic in the other variable. Therefore two conics intersect in general in four points. Depending upon the roots of the quartic the following cases arise:

(*i*) all the common points are real and distinct;

(*ii*) two real and distinct; two real and coincident;

(*iii*) coincident points in pairs;

(*iv*) all the points coincident;

(*v*) two real, distinct and two imaginary;

(*vi*) two real, coincident and two imaginary;

(*vii*) three real, coincident and one real;

(*viii*) all the points imaginary.

ವಿಸರ್ಜಿಸಿದರೆ ಇನ್ನೊಂದು ಚರದಲ್ಲಿ ವರ್ಗ ಸಮೀಕರಣ ಲಭಿಸುವುದು. ಇದಕ್ಕೆ ಸಾಮಾನ್ಯವಾಗಿ ಎರಡು ಮೂಲಗಳಿವೆ. ಇದರಿಂದ $F=0$, $L=0$ ಇವುಗಳಿಗೆ ಎರಡು ಸಾಮಾನ್ಯ ಬಿಂದುಗಳಿವೆ ಎಂದು ತಿಳಿಯುವುದು. ಇವು ವಾಸ್ತವ ಮತ್ತು ನಿರ್ದಿಷ್ಟ, ಐಕ್ಯ ಅಥವಾ ಊಹ್ಯ ಆಗಿರಬಹುದು. ವರ್ಗ ಸಮೀಕರಣದ ಶೋಧಕ ಈ ಬಿಂದುಗಳ ಸ್ವರೂಪವನ್ನು ನಿರ್ಧರಿಸುತ್ತದೆ.

$F=0$ ಮತ್ತು $L=0$ ಇವುಗಳ ಸಾಮಾನ್ಯ ಬಿಂದುಗಳ ಮೂಲಕ ಸಾಗುವ ಶಂಕುಜವನ್ನು $F+\lambda L=0$ ಸೂಚಿಸುತ್ತದೆ. ಇಲ್ಲಿ λ ಒಂದು ಸ್ಥಿರಾಂಕ. λದ ಬೆಲೆ ಬದಲಾದಂತೆ $F+\lambda L=0$ ಯು $L=0$ ಸಾಮಾನ್ಯಜ್ಯಾ ಆಗಿರುವ ಒಂದು ಶಂಕುಜ ವ್ಯವಸ್ಥೆಯನ್ನು ನೀಡುವುದು.

ಉದಾಹರಣೆ : ಸಾಮಾನ್ಯಜ್ಯಾ ಇರುವ ಒಂದು ಶಂಕುಜ ವ್ಯವಸ್ಥೆಯನ್ನು ಕುರಿತು ಒಂದು ದತ್ತ ಬಿಂದುವಿನ ಧ್ರುವೀಯುಗಳು ಒಂದು ಸ್ಥಿರ ಬಿಂದುವಿನ ಮೂಲಕ ಸಾಗುತ್ತವೆ ಎಂದು ಸಾಧಿಸಿ.

$$F+\lambda L \equiv ax^2+2hxy+by^2+2gx+2fy+c+\lambda(lx+my+n)=0$$

ವ್ಯವಸ್ಥೆಯನ್ನು ಕುರಿತು (x_1, y_1) ಬಿಂದುವಿನ ಧ್ರುವೀಯ $F_1+\lambda L_1=0$. ಇದು λದ ವಿವಿಧ ಬೆಲೆಗಳಿಗೆ $F_1=0$, $L_1=0$ ಸರಳ ರೇಖೆಗಳ ಸ್ಥಿರ ಛೇದನ ಬಿಂದುವಿನ ಮೂಲಕ ಸಾಗುವ ಸರಳರೇಖೆಗಳ ವ್ಯವಸ್ಥೆ.

೧.೮ ಒಂದು ಜೊತೆ ಶಂಕುಜಗಳು

$F=0$, $F'=0$ ಒಂದು ಜೊತೆ ಶಂಕುಜಗಳಾಗಿರಲಿ. ಯಾವುದೇ ಒಂದು ಚರವನ್ನು ಇವುಗಳ ನಡುವೆ ವಿಸರ್ಜಿಸಿದರೆ ಇನ್ನೊಂದು ಚರದಲ್ಲಿ ನಾಲ್ಕನೆಯ ಘಾತದ ಒಂದು ಸಮೀಕರಣ ದೊರೆಯುವುದು. ಆದ್ದರಿಂದ ಎರಡು ಶಂಕುಜಗಳು ಸಾಮಾನ್ಯವಾಗಿ ನಾಲ್ಕು ಬಿಂದುಗಳಲ್ಲಿ ಛೇದಿಸುತ್ತವೆ. ಈ ಸಮೀಕರಣದ ಮೂಲಗಳನ್ನು ಅನುಸರಿಸಿ ಕೆಳಗಿನ ಸಂದರ್ಭಗಳು ಒದಗುತ್ತವೆ :

(*i*) ಎಲ್ಲ ಸಾಮಾನ್ಯ ಬಿಂದುಗಳೂ ವಾಸ್ತವ ಮತ್ತು ನಿರ್ದಿಷ್ಟ ;
(*ii*) ಎರಡು ವಾಸ್ತವ ಮತ್ತು ನಿರ್ದಿಷ್ಟ ; ಎರಡು ವಾಸ್ತವ ಮತ್ತು ಐಕ್ಯ ;
(*iii*) ಒಂದು ಜೊತೆ ಐಕ್ಯ ಬಿಂದುಗಳು ;
(*iv*) ಎಲ್ಲ ಬಿಂದುಗಳೂ ಐಕ್ಯ ;
(*v*) ಎರಡು ವಾಸ್ತವ, ನಿರ್ದಿಷ್ಟ ಮತ್ತು ಎರಡು ಊಹ್ಯ ;
(*vi*) ಎರಡು ವಾಸ್ತವ, ಐಕ್ಯ ಮತ್ತು ಎರಡು ಊಹ್ಯ ;
(*vii*) ಮೂರು ವಾಸ್ತವ ಮತ್ತು ಐಕ್ಯ ಮತ್ತು ಒಂದು ವಾಸ್ತವ ;
(*viii*) ಎಲ್ಲ ಬಿಂದುಗಳೂ ಊಹ್ಯ.

The general equation to the system of conics passing through the common points of $F=0$, $F'=0$ is $F+\lambda F'=0$, where λ is an arbitrary constant.

Example: Find the condition that the common points of two conics may be concyclic.

Choose λ such that $F+\lambda F'=0$ is a circle.

$$\therefore \quad a+\lambda a'=b+\lambda b'$$

$$h+\lambda h'=0$$

$$\therefore \quad \frac{a-b}{a'-b'}=\frac{h}{h'} \quad (=-\lambda)$$

By substituting this value of λ in $F+\lambda F'=0$, we can obtain the equation to the circle.

1.9 Centre of a conic. The centre of a conic when it exists is a point C which is the middle point of all chords passing through C and terminated by the conic. Let us suppose that the origin is the centre of the conic $F=0$. Let $P(x_1, y_1)$ be any point on the conic. Then its diametrically opposite point $Q(-x_1, -y_1)$ is also a point on the conic.

$$\therefore \quad ax_1^2+2hx_1y_1+by_1^2+2gx_1+2fy_1+c=0$$

$$ax_1^2+2hx_1y_1+by_1^2-2gx_1-2fy_1+c=0$$

$$\therefore \quad gx_1+fy_1=0$$

This should be true for all points on $F=0$. Therefore it is an identity. Hence $g=f=0$. Thus for a conic whose centre is at the origin the first degree terms do not exist. We shall use this property to find out the centre of the general conic $F=0$.

Let $C(x_1, y_1)$ be its centre. Give a parallel transformation to the axes to the point C. If the new current co-ordinates are X, Y the transformation equations are

$F=0$, $F'=0$ ಇವುಗಳ ಸಾಮಾನ್ಯ ಬಿಂದುಗಳ ಮೂಲಕ ಸಾಗುವ ಶಂಕುಜ ವ್ಯವಸ್ಥೆಯ ಸಾಮಾನ್ಯ ಸಮೀಕರಣ $F+\lambda F'=0$. λ ಯಾವುದೋ ಒಂದು ಸ್ಥಿರ ಸಂಖ್ಯೆ.

ಉದಾಹರಣೆ: ಎರಡು ಶಂಕುಜಗಳ ಸಾಮಾನ್ಯ ಬಿಂದುಗಳು ಚಕ್ರೀಯ ವಾಗಿರಲು ನಿಯಮ ಕಂಡುಹಿಡಿಯಿರಿ.

$F+\lambda F'=0$ ವೃತ್ತವಾಗಿರುವಂತೆ λ ಆರಿಸಿ.

$$\therefore \quad a+\lambda a'=b+\lambda b'$$

$$h+\lambda h'=0$$

$$\therefore \quad \frac{a-b}{a'-b'}=\frac{h}{h'} \ (=-\lambda)$$

$F+\lambda F'=0$ ಯಲ್ಲಿ λ ದ ಬೆಲೆ ಆದೇಶಿಸುವುದರ ಮೂಲಕ ವೃತ್ತದ ಸಮೀಕರಣ ಪಡೆಯಬಹುದು.

೧.೯ ಶಂಕುಜದ ಕೇಂದ್ರ

ಒಂದು ಶಂಕುಜಕ್ಕೆ C ಎಂಬ ಒಂದು ಕೇಂದ್ರವಿದ್ದರೆ, ಆ ಬಿಂದುವಿನ ಮೂಲಕ ಸಾಗುವ ಮತ್ತು ಶಂಕುಜದಿಂದ ಪರಿಮಿತವಾಗುವ ಎಲ್ಲ ಜ್ಯಾಗಳ ಮಧ್ಯಬಿಂದು C ಆಗುವುದು. $F=0$ ಶಂಕುಜದ ಕೇಂದ್ರ ಮೂಲಬಿಂದು ಎಂದು ಭಾವಿಸೋಣ. ಆಗ ಅದರ ವ್ಯಾಸೀಯ ವಿರುದ್ಧ ಬಿಂದು $Q(-x_1, \ -y_1)$ ಸಹ ಶಂಕುಜದ ಮೇಲಿದೆ.

$$\therefore \quad ax_1^2+2hx_1y_1+by_1^2+2gx_1+2fy_1+c=0$$

ಮತ್ತು $ax_1^2+2hx_1y_1+by_1^2-2gx_1-2fy_1+c=0$

$$\therefore \quad gx_1+fy_1=0$$

ಇದು $F=0$ ಯ ಮೇಲಿರುವ ಎಲ್ಲ ಬಿಂದುಗಳಿಗೂ ಸತ್ಯವಾಗಬೇಕು. ಆದ್ದರಿಂದ ಇದೊಂದು ನಿತ್ಯ ಸಮೀಕರಣ. ಆದ್ದರಿಂದ $g=f=0$. ಮೂಲಬಿಂದುವಿನಲ್ಲಿ ಕೇಂದ್ರವಿರುವ ಶಂಕುಜದ ಸಮೀಕರಣದಲ್ಲಿ ಒಂದನೆಯ ಘಾತದ ಪದಗಳಿರುವುದಿಲ್ಲ. $F=0$ ಎಂಬ ಸಾಮಾನ್ಯ ಶಂಕುಜದ ಕೇಂದ್ರ ಕಂಡುಹಿಡಿಯಲು ಈ ಗುಣವನ್ನು ಬಳಸುತ್ತೇವೆ.

$C\ (x_1, \ y_1)$ ಅದರ ಕೇಂದ್ರವಾಗಿರಲಿ. ಅಕ್ಷಗಳಿಗೆ ಒಂದು ಸಮಾನಾಂತರ ಪರಿವರ್ತನೆಯನ್ನು C ಬಿಂದುವಿಗೆ ನೀಡಬೇಕು. ಹೊಸ ಚಾಲ್ತಿ ನಿರ್ದೇಶಕಗಳು X, Y ಆಗಿದ್ದರೆ

$$x = x_1 + X$$
$$y = y_1 + Y$$

The transformed equation is

$$aX^2 + 2hXY + bY^2 + 2\,(ax_1 + hy_1 + g)X + 2\,(gx_1 + fy_1 + c)Y$$
$$+ x_1(ax_1 + hy_1 + g) + y_1(hx_1 + by_1 + f) + (gx_1 + fy_1 + c) = 0 \quad (1)$$

Since the (new) origin is the centre of this conic, we have

$$ax_1 + hy_1 + g = 0$$
$$hx_1 + by_1 + f = 0$$

The co-ordinates of the centre are given by

$$x_1 = \frac{hf - bg}{ab - h^2},\quad y_1 = \frac{gh - af}{ab - h^2}$$

The transformed equation (1) becomes

$$aX^2 + 2hXY + bY^2 + gx_1 + fy_1 + c = 0$$

Or, $aX^2 + 2hXY + bY^2 + \dfrac{\Delta}{ab - h^2} = 0$

where $\Delta = \begin{vmatrix} a & h & g \\ h & b & f \\ g & f & c \end{vmatrix}$

Therefore the standard form of a central conic with reference to its centre as origin is $Ax^2 + 2Hxy + By^2 = 1$.

Note: 1. The equations to determine the centre are

$$\frac{\partial F}{\partial x} = \frac{\partial F}{\partial y} = 0$$

2. The centre is finite provided that $ab - h^2 \neq 0$, that is when the conic is not a parabola. The ellipse and the hyperbola which have finite centres are called the central conics. The parabola is a noncentral conic. Algebraically, since $ab - h^2 = 0$ for a parabola, its centre is at infinity.

$$x = x_1 + X$$

$$y = y_1 + Y$$

ಇವು ಪರಿವರ್ತನೆಯ ಸಮೀಕರಣಗಳು. ಪರಿವರ್ತಿತ ಸಮೀಕರಣ :

$$aX^2 + 2hXY + bY^2 + 2(ax_1 + hy_1 + g)X + 2(gx_1 + fy_1 + c)Y$$
$$+ x_1(ax_1 + hy_1 + g) + y_1(hx_1 + by_1 + f) + (gx_1 + fy_1 + c) = 0 \quad (1)$$

ಹೊಸ ಮೂಲಬಿಂದು ಈ ಶಂಕುಜದ ಕೇಂದ್ರವಾಗಿರುವುದರಿಂದ

$$ax_1 + hy_1 + g = 0$$

$$hx_1 + by_1 + f = 0$$

ಕೇಂದ್ರದ ನಿರ್ದೇಶಕಗಳನ್ನು

$$x_1 = \frac{hf - bg}{ab - h^2}, \quad y_1 = \frac{gh - af}{ab - h^2}$$

ಸಮೀಕರಣಗಳು ಕೊಡುತ್ತವೆ. ಪರಿವರ್ತಿತ ಸಮೀಕರಣ (1) ಈಗ

$$aX^2 + 2hXY + bY^2 + 2gx_1 + 2fy_1 + c = 0$$ ಆಗುವುದು.

ಅಥವಾ, $aX^2 + 2hXY + bY^2 + \dfrac{\Delta}{ab - h^2} = 0$

ಇಲ್ಲಿ $\Delta = \begin{vmatrix} a & h & g \\ h & b & f \\ g & f & c \end{vmatrix}$

ಆದ್ದರಿಂದ ಕೇಂದ್ರವು ಮೂಲ ಬಿಂದುವಿನಲ್ಲಿರುವ ಒಂದು ಕೇಂದ್ರೀಯ ಶಂಕುಜದ ಸುಲಭ ಸಮೀಕರಣ $Ax^2 + 2Hxy + By^2 = 1$ ರೂಪದಲ್ಲಿದೆ.

ಸೂಚನೆ: 1. ಕೇಂದ್ರವನ್ನು ನಿರ್ಧರಿಸುವ ಸಮೀಕರಣಗಳು

$$\frac{\partial F}{\partial x} = \frac{\partial F}{\partial y} = 0$$

2. $ab - h^2 \neq 0$ ಆದಾಗ ಕೇಂದ್ರ ಪರ್ಯಾಪ್ತ (ಅಂದರೆ ಶಂಕುಜ ಪ್ಯರಾಬೊಲ ಅಲ್ಲದಾಗ). ಪರ್ಯಾಪ್ತ ಕೇಂದ್ರಗಳಿರುವ ದೀರ್ಘವೃತ್ತ ಮತ್ತು ಹೈಪರ್ಬೋಲಗಳನ್ನು ಕೇಂದ್ರೀಯ ಶಂಕುಜಗಳೆಂದು ಕರೆಯುತ್ತೇವೆ. ಪ್ಯರಾಬೊಲ ಒಂದು ನಕೇಂದ್ರೀಯ ಶಂಕುಜ. ಬೈಜಿಕವಾಗಿ ಹೇಳುವುದಾದರೆ ಪ್ಯರಾಬೊಲಕ್ಕೆ $ab - h^2 = 0$ ಆಗಿರುವುದರಿಂದ ಅದರ ಕೇಂದ್ರ ಅನಂತದಲ್ಲಿದೆ.

3. If $hf-bg=gh-af=0$ and $ab-h^2\neq 0$, the origin is the centre. In this case $x_1=y_1=0$.

Now $$hf\times gh=bg\times af$$

$$\therefore\ fg\,(ab-h^2)=0$$

Now $$ab-h^2\neq 0$$

$$\therefore\ fg=0$$

It is easy to see that $f=g=0$.

4. If $hf-bg=gh-af=ab-h^2=0$, the conic degenerates into a pair of parallel straight lines.

5. Let C (x_1, y_1) be the centre of $F=0$. Then $\dfrac{x-x_1}{l}=\dfrac{y-y_1}{m}=r$ is a diameter. The algebraic distances of the extremities of the diameter through C are given by the quadratic in r

$$(al^2+2hlm+bm^2)\,r^2+\left(l\,\frac{\partial F}{\partial x_1}+m\,\frac{\partial F}{\partial y_1}\right)r+F_{11}=0$$

The two roots r_1 and r_2 satisfy the condition $r_1=-r_2$ or $r_1+r_2=0$.

$$\therefore\ l\,\frac{\partial F}{\partial x_1}+m\,\frac{\partial F}{\partial y_1}=0$$

This should be true for all diameters, that is for all values of l and m.

$$\therefore\ \frac{\partial F}{\partial x_1}=\frac{\partial F}{\partial y_1}=0.$$

These equations determine the centre of $F=0$.

Example: The centre of the conic $x^2-xy+y^2+4x-5y-2=0$ is given by

$$2x_1-y_1+4=0$$
$$-x_1+2y_1-5=0$$

Its co-ordinates are $(-1, 2)$. The transformed equation is $[x=-1+X,\ y=2+Y]$

$$X^2-XY+Y^2-9=0$$

3. $hf-bg=gh-af=0$ ಮತ್ತು $ab-h^2\neq 0$ ಆಗಿರುವಾಗ ಮೂಲಬಿಂದು ಕೇಂದ್ರ. ಈ ಸಂದರ್ಭದಲ್ಲಿ $x_1=y_1=0$. ಈಗ $hf \cdot gh=bg \cdot af$

$$\therefore \quad fg(ab-h^2)=0$$

ಆದರೆ $ab-h^2\neq 0$

$$\therefore \quad fg=0$$

ಇಲ್ಲಿ f ಮತ್ತು g ಎರಡೂ ಶೂನ್ಯ ಎಂದು ಸುಲಭವಾಗಿ ನೋಡಬಹುದು.

4. $hf-bg=gh-af=ab-h^2=0$ ಆಗುವಾಗ ಶಂಕುಜ ಒಂದು ಜೊತೆ ಸಮಾನಾಂತರ ಸರಳ ರೇಖೆಗಳಾಗಿ ವಿಕೃತಗೊಳ್ಳುತ್ತದೆ.

5. C (x_1, y_1) ಬಿಂದು $F=0$ ಯ ಕೇಂದ್ರವಾಗಿರಲಿ. ಆಗ $\frac{x-x_1}{l}=\frac{y-y_1}{m}=\frac{z-z_1}{n}=r$ ಒಂದು ವ್ಯಾಸ. C ಯ ಮೂಲಕ ಸಾಗುವ ವ್ಯಾಸದ ಕೊನೆಗಳ ದೂರಗಳನ್ನು ನೀಡುವ ವರ್ಗಸಮೀಕರಣ

$$(al^2+2\,hlm+bm^2)r^2+\left(l\frac{\partial F}{\partial x_1}+m\frac{\partial F}{\partial y_1}\right)r+F_{11}=0.$$

ಇದರ ಎರಡು ಮೂಲಗಳಾದ r_1, r_2 ಗಳು $r_1=-r_2$ ಅಥವಾ $r_1+r_2=0$ ಎಂಬ ನಿಯಮದಿಂದ ಬಂಧಿತವಾಗಿವೆ.

$$\therefore \quad l\frac{\partial F}{\partial x_1}+m\frac{\partial F}{\partial y_1}=0$$

ಈ ಸಮೀಕರಣ ಎಲ್ಲ ವ್ಯಾಸಗಳಿಗೂ, ಅಂದರೆ l ಮತ್ತು m ಗಳ ಎಲ್ಲ ಬೆಲೆಗಳಿಗೂ, ತಾಳೆಯಾಗಬೇಕು.

$$\therefore \quad \frac{\partial F}{\partial x_1}=\frac{\partial F}{\partial y_1}=0$$

ಈ ಸಮೀಕರಣಗಳು $F=0$ ಯ ಕೇಂದ್ರವನ್ನು ನೀಡುತ್ತವೆ.

ಉದಾಹರಣೆ: $x^2-xy+y^2+4\,x-5\,y-2=0$

ಶಂಕುಜದ ಕೇಂದ್ರವನ್ನು $2\,x_1-y_1+4=0$

$$-x_1+2y_1-5=0$$

ಕೊಡುತ್ತವೆ. ಕೇಂದ್ರದ ನಿರ್ದೇಶಕಗಳು : $(-1,\ 2)$. ಪರಿವರ್ತಿತ ಸಮೀಕರಣ : $[\,x=-1+X,\ y=2+Y\,]$

$$X^2-XY+Y^2-9=0.$$

1.10 Asymptotes of a conic. The tangents at infinity to a conic are called the asymptotes. We have seen that the homogeneous co-ordinates of the points at infinity of $F=0$ are $I(1, m_1, 0)$, $J(1, m_2, 0)$, where $m_1+m_2=\frac{-2h}{b}$, $m_1m_2=\frac{a}{b}$. The combined equation to the tangents at I and J is

$$\left(\frac{\partial F}{\partial x}+m_1\frac{\partial F}{\partial y}\right)\left(\frac{\partial F}{\partial x}+m_2\frac{\partial F}{\partial y}\right)=0$$

$$\therefore \quad \left(\frac{\partial F}{\partial x}\right)^2+(m_1+m_2)\frac{\partial F}{\partial x}\frac{\partial F}{\partial y}+m_1m_2\left(\frac{\partial F}{\partial y}\right)^2=0$$

$$\therefore \quad b\left(\frac{\partial F}{\partial x}\right)^2-2h\frac{\partial F}{\partial x}\frac{\partial F}{\partial y}+a\left(\frac{\partial F}{\partial y}\right)^2=0$$

This is the combined equation to the asymptotes of $F=0$. It satisfies the equations to the centre, viz., $\frac{\partial F}{\partial x}=\frac{\partial F}{\partial y}=0$. Therefore the asymptotes intersect at the centre of the conic. They are the tangents from the centre to the conic. Since these tangents touch the conic at I and J, IJ (the line at infinity) is the chord of contact of tangents from (or the polar of) the centre C.

This can be verified easily. The chord of contact of $C(x_1, y_1)$ is

$$(ax_1+hy_1+g)x+(hx_1+by_1+f)y+(gx_1+fy_1+c)=0$$

But $\quad ax_1+hy_1+g=hx_1+by_1+f=0$

$\therefore \quad gx_1+fy_1+c=0$

$\therefore \quad 1=0$

This is the line at infinity.

The centre of the conic is the pole of the line at infinity.

1.11 On the form of the equation to the asymptotes. For the central conic $ax^2+2hxy+by^2=1$ (centre is origin), the combined equation to the asymptotes is $ax^2+2hxy+by^2=0$.

೧.೧೦ ಶಂಕುಜದ ಅನಂತ ಸ್ಪರ್ಶಕಗಳು

ಶಂಕುಜಕ್ಕೆ ಅನಂತದಲ್ಲಿ ಎಳೆದ ಸ್ಪರ್ಶಕಗಳ ಹೆಸರು ಅನಂತಸ್ಪರ್ಶಕಗಳು. $F=0$ ಮೇಲಿನ ಅನಂತ ಬಿಂದುಗಳ ಸಮಘಾತೀಯ ನಿರ್ದೇಶಕಗಳು $I(1, m_1, 0)$, $J(1, m_2, 0)$ ಎಂದು ನೋಡಿದ್ದೇವೆ. ಇಲ್ಲಿ $m_1+m_2=\frac{-2h}{b}$, $m_1m_2=\frac{a}{b}$. I ಮತ್ತು J ಗಳಲ್ಲಿ ಎಳೆದ ಸ್ಪರ್ಶಕಗಳ ಒಟ್ಟು ಸಮೀಕರಣ

$$\left(\frac{\partial F}{\partial x}+m_1\frac{\partial F}{\partial y}\right)\left(\frac{\partial F}{\partial x}+m_2\frac{\partial F}{\partial y}\right)=0$$

$$\therefore\quad \left(\frac{\partial F}{\partial x}\right)^2+(m_1+m_2)\frac{\partial F}{\partial x}\frac{\partial F}{\partial y}+m_1m_2\left(\frac{\partial F}{\partial y}\right)^2=0$$

$$\therefore\quad b\left(\frac{\partial F}{\partial x}\right)^2-2h\frac{\partial F}{\partial x}\frac{\partial F}{\partial y}+a\left(\frac{\partial F}{\partial y}\right)^2=0$$

ಇದು $F=0$ ಯ ಅನಂತ ಸ್ಪರ್ಶಕಗಳ ಒಟ್ಟು ಸಮೀಕರಣ. ಇದು ಕೇಂದ್ರದ ಸಮೀಕರಣಗಳಾದ $\frac{\partial F}{\partial x}=\frac{\partial F}{\partial y}=0$ ಇವುಗಳನ್ನು ತಾಳೆ ಮಾಡುವುದರಿಂದ ಅನಂತ ಸ್ಪರ್ಶಕಗಳು ಕೇಂದ್ರದಲ್ಲಿ ಛೇದಿಸುತ್ತವೆ. ಆದ್ದರಿಂದ ಅನಂತ ಸ್ಪರ್ಶಕಗಳು ಕೇಂದ್ರದಿಂದ ಶಂಕುಜಕ್ಕೆ ಎಳೆದ ಸ್ಪರ್ಶಕಗಳು. ಈ ಸ್ಪರ್ಶಕಗಳು ಶಂಕುಜವನ್ನು I ಮತ್ತು J ಬಿಂದುಗಳಲ್ಲಿ ಸ್ಪರ್ಶಿಸುವುದರಿಂದ IJ (ಅನಂತರೇಖೆ) ಕೇಂದ್ರ ಬಿಂದುವಿನ ಸ್ಪರ್ಶಕ ಜ್ಯಾ (ಅಥವಾ ಧ್ರುವೀಯ).

ಇದನ್ನು ಸುಲಭವಾಗಿ ತಾಳೆ ನೋಡಬಹುದು. $C(x_1, y_1)$ಯ ಸ್ಪರ್ಶಕ ಜ್ಯಾ

$$(ax_1+hy_1+g)x+(hx_1+by_1+f)y+(gx_1+fy_1+c)=0$$

ಅದರೆ $ax_1+hy_1+g=hx_1+by_1+f=0$

$$\therefore\quad gx_1+fy_1+c=0$$

$$\therefore\quad 1=0$$

ಇದು ಅನಂತ ರೇಖೆ. ಕೇಂದ್ರ ಅನಂತ ರೇಖೆಯ ಧ್ರುವ.

೧.೧೧ ಅನಂತ ಸ್ಪರ್ಶಕಗಳ ಸಮೀಕರಣದ ರೂಪ

ಕೇಂದ್ರೀಯ ಶಂಕುಜ $ax^2+2hxy+by^2=1$ (ಮೂಲಬಿಂದು ಕೇಂದ್ರ) ಇದರ ಅನಂತ ಸ್ಪರ್ಶಕಗಳ ಒಟ್ಟು ಸಮೀಕರಣ $ax^2+2hxy+by^2=0$. ಇವೆರಡು

These equations differ by a constant. Further, the asymptotes are a pair of straight lines. We use this property to determine the equation to the asymptotes of $F=0$. Let $F+\lambda=0$ (λ a constant) represent the asymptotes. λ is chosen such that this equation represents a pair of lines. The condition is

$$\begin{vmatrix} a & h & g \\ h & b & f \\ g & f & c+\lambda \end{vmatrix} = 0$$

$$\therefore \quad \lambda = -\frac{\Delta}{ab-h^2}$$

$$\therefore \quad F - \frac{\Delta}{ab-h^2} = 0 \text{ is the required equation.}$$

Example: The asymptotes of the conic $x^2+3xy+2y^2-y+2=0$ are obtained as follows.

$$\Delta = -\tfrac{3}{4}, \quad ab-h^2 = -\tfrac{1}{4}$$

$$\therefore \quad \text{Asymptotes} \quad x^2+3xy+2y^2-y+2-3=0$$

$$\therefore \quad (x+y-1)(x+2y+1)=0$$

The separate equations are

$$x+y-1=0, \quad x+2y+1=0.$$

An alternative method would be to find the centre and then write the combined equation to the pair of tangents from the centre.

1.12 Joachimsthal's ratio equation. Let the join of $P(x_1, y_1)$ and $Q(x_2, y_2)$ meet $F=0$ in L. If $PL:LQ=\lambda:1$ then the co-ordinates of L are $\left(\frac{\lambda x_2+x_1}{\lambda+1}, \frac{\lambda y_2+y_1}{\lambda+1}\right)$.

Since L lies on $F=0$, we have

$$F_{22}\lambda^2 + 2F_{12}\lambda + F_{11} = 0 \qquad \dots \quad (1)$$

This is called Joachimsthal's ratio equation. It is a quadratic in λ. It shows that PQ intersects the conic in two points. Let M

ಸಮೀಕರಣಗಳ ವ್ಯತ್ಯಾಸ ಒಂದು ಸ್ಥಿರಾಂಕ ; ಮತ್ತು ಅನಂತ ಸ್ಪರ್ಶಕಗಳು ಒಂದು ಜೊತೆ ಸರಳರೇಖೆಗಳು. ಈ ಗುಣವನ್ನು ಬಳಸಿಕೊಂಡು $F=0$ ಶಂಕುಜದ ಅನಂತ ಸ್ಪರ್ಶಕಗಳ ಸಮೀಕರಣ ಕಂಡುಹಿಡಿಯುತ್ತೇವೆ. $F+\lambda=0$ (λ ಒಂದು ಸ್ಥಿರಾಂಕ) ಅನಂತ ಸ್ಪರ್ಶಕಗಳನ್ನು ಸೂಚಿಸಲಿ. ಈ ಸಮೀಕರಣ ಒಂದು ಜೊತೆ ಸರಳರೇಖೆಗಳನ್ನು ಸೂಚಿಸುವಂತೆ λ ವನ್ನು ಆರಿಸುತ್ತೇವೆ. ಇದರ ನಿಯಮ

$$\begin{vmatrix} a & h & g \\ h & b & f \\ g & f & c+\lambda \end{vmatrix} = 0$$

$$\therefore \quad \lambda = \frac{-\Delta}{ab-h^2}$$

$$\therefore \quad F - \frac{\Delta}{ab-h^2} = 0 \quad \text{ಬೇಕಾದ ಸಮೀಕರಣ.}$$

ಉದಾಹರಣೆ : $x^2+3xy+2y^2-y+2=0$ ಶಂಕುಜದ ಅನಂತ ಸ್ಪರ್ಶಕಗಳ ಸಮೀಕರಣ ಈ ಕೆಳಗಿನಂತೆ ಪಡೆಯುತ್ತೇವೆ.

$$\Delta = -\tfrac{3}{4}, \quad ab-h^2 = -\tfrac{1}{4}$$

$\therefore$ ಅನಂತ ಸ್ಪರ್ಶಕಗಳು $x^2+3xy+2y^2-y+2-3=0$

$$\therefore \quad (x+y-1)(x+2y+1)=0$$

ಪ್ರತ್ಯೇಕ ಸಮೀಕರಣಗಳು $x+y-1=0$, $x+2y+1=0$. ಕೇಂದ್ರದ ನಿರ್ದೇಶಕಗಳನ್ನು ಕಂಡುಹಿಡಿದು ಆ ಬಿಂದುವಿನಿಂದ ಶಂಕುಜಕ್ಕೆ ಎಳೆದ ಒಂದು ಜೊತೆ ಸ್ಪರ್ಶಕಗಳ ಸಮೀಕರಣ ಬರೆಯುವುದು ಇನ್ನೊಂದು ವಿಧಾನ.

೧.೧೨ ಯೋಕಿಮ್‌ಸ್ಥಾಲನ ನಿಷ್ಪತ್ತಿ ಸಮೀಕರಣ

$P(x_1, y_1)$ ಮತ್ತು $Q(x_2, y_2)$ ಗಳ ಜೋಡಣೆ $F=0$ ಯನ್ನು L ನಲ್ಲಿ ಛೇದಿಸಲಿ. $PL : LQ = \lambda : 1$ ಆಗಿದ್ದರೆ L ನ ನಿರ್ದೇಶಕಗಳು : $\left(\frac{\lambda x_2+x_1}{\lambda+1}, \frac{\lambda y_2+y_1}{\lambda+1}\right)$. L ಬಿಂದು $F=0$ ಯ ಮೇಲೆ ಇರುವುದರಿಂದ

$$F_{22}\lambda^2+2F_{12}\lambda+F_{11}=0 \qquad \dots \quad (1)$$

ಇದರ ಹೆಸರು ಯೋಕಿಮ್‌ಸ್ಥಾಲನ ನಿಷ್ಪತ್ತಿ ಸಮೀಕರಣ. ಇದು λ ದಲ್ಲಿ ಒಂದು ವರ್ಗ ಸಮೀಕರಣ. PQ ಶಂಕುಜವನ್ನು ಎರಡು ಬಿಂದುಗಳಲ್ಲಿ ಛೇದಿಸುವುದೆಂದು

be the other point of intersection. If λ_1, λ_2, be the roots o (1) then we have,

$$\frac{PL}{LQ}=\lambda_1, \quad \frac{PM}{MQ}=\lambda_2$$

1.13 Pole and polar. If a range of four points A, B, C, D is such that B and D divide AC harmonically, then it is called a harmonic range. We have $\frac{AB}{BC}=\frac{AD}{CD}$

$$\therefore \quad \frac{AB \cdot CD}{AD \cdot BC}=1$$

$$\therefore \quad \frac{AB \cdot CD}{AD \cdot CB}=-1$$

We write this as $(ABCD)=-1$ or $(AC, BD)=-1$.

D is called the harmonic conjugate of B with respect to AC and *vice versa*. A similar property holds good for A and C with respect to BD.

Take a fixed point P and draw any number of secants to intersect the conic $F=0$ in L_1, M_1; L_2, M_2; L_3, M_3; etc. Choose points Q_1, Q_2, Q_3, etc., on these secants such that $(PQ, LM)=-1$ for each secant. Thus the Q's are the harmonic conjugates of P for LM's . Adverting to Joachimsthal's ratio equation we have $P(x_1, y_1)$ fixed; $Q(x_2, y_2)$ variable subject to the condition $(PQ, LM)=-1$.

$$\therefore \quad \frac{PL}{LQ}=-\frac{PM}{MQ}$$

$$\therefore \quad \lambda_1=-\lambda_2$$

$$\therefore \quad \lambda_1+\lambda_2=0$$

$$\therefore \quad F_{12}=0$$

ಇದರಿಂದ ತಿಳಿಯುತ್ತದೆ. ಎರಡನೆಯ ಛೇದನ ಬಿಂದು M ಆಗಿರಲಿ. (1) ರ ಮೂಲಗಳು λ_1, λ_2 ಆಗಿದ್ದರೆ

$$\frac{PL}{LQ}=\lambda_1, \quad \frac{PM}{MQ}=\lambda_2$$

೧.೧೩ ಧ್ರುವ ಮತ್ತು ಧ್ರುವೀಯ

ಒಂದು ಸಾಲಿನಲ್ಲಿರುವ A, B, C, D ಎಂಬ ಬಿಂದುಗಳಲ್ಲಿ B ಮತ್ತು D ಗಳು AC ಯನ್ನು ಸಂಗತವಾಗಿ ವಿಭಾಗಿಸಿದರೆ ಆ ಸಾಲನ್ನು ಸಂಗತ ಸಾಲು ಎಂದು ಕರೆಯುತ್ತೇವೆ. ಆದ್ದರಿಂದ $\frac{AB}{BC}=\frac{AD}{CD}$

$$\therefore \quad \frac{AB\cdot CD}{AD\cdot BC}=+1$$

$$\therefore \quad \frac{AB\cdot CD}{AD\cdot CB}=-1$$

ಇದನ್ನು $(A\,B\,C\,D)=-1$ ಅಥವಾ $(AC,\ BD)=-1$ ಎಂದು ಬರೆಯುತ್ತೇವೆ. AC ಯನ್ನು ಕುರಿತು B ಯ ಸಂಗತ ಅನುವರ್ತಿ D, ಅದೇ ರೀತಿ Dಯ ಸಂಗತ ಅನುವರ್ತಿ B. BDಯನ್ನು ಕುರಿತು A ಮತ್ತು C ಗಳು ಪರಸ್ಪರ ಸಂಗತ ಅನುವರ್ತಿಗಳು.

P ಎಂಬ ಸ್ಥಿರಬಿಂದು ತೆಗೆದುಕೊಂಡು ಅದರ ಮೂಲಕ ಹಲವಾರು ಛೇದಕಗಳನ್ನು ಎಳೆಯಬೇಕು. ಇವು $F=0$ ಶಂಕುಜವನ್ನು L_1, M_1 ; L_2, M_2 ; L_3, M_3 ; ಇತ್ಯಾದಿ ಬಿಂದುಗಳಲ್ಲಿ ಛೇದಿಸಲಿ. ಈ ಛೇದಕಗಳ ಮೇಲೆ Q_1, Q_2, Q_3 ಇತ್ಯಾದಿ ಬಿಂದುಗಳನ್ನು ಪ್ರತಿಯೊಂದು ಛೇದಕಕ್ಕೂ $(PQ,\ LM)=-1$ ಆಗಿರುವಂತೆ ಆರಿಸಬೇಕು. ಆಗ LM ಗಳನ್ನು ಕುರಿತು P ಯ ಸಂಗತ ಅನುವರ್ತಿಗಳು Q ಗಳಾಗುತ್ತವೆ. ಯೋಕಿಮ್‌ಸ್ಥಾಲನ ಸಮೀಕರಣದಲ್ಲಿ $P(x_1,\ y_1)$ ಸ್ಥಿರಬಿಂದು ; $Q(x_2,\ y_2)$ ಬಿಂದು $(PQ,\ LM)=-1$ ನಿಯಮಾನುಸಾರ ಚಲಿಸುತ್ತದೆ.

$$\therefore \quad \frac{PL}{LQ}=-\frac{PM}{MQ}$$

$$\therefore \quad \lambda_1=-\lambda_2$$

$$\lambda_1+\lambda_2=0$$

$$\therefore \quad F_{12}=0$$

i.e., $ax_1x_2+h(x_1y_2+x_2y_1)+by_1y_2+g(x_1+x_2)$
$+f(y_1+y_2)+c=0$

$\therefore$ Locus of Q is $axx_1+h(xy_1+x_1y)+byy_1+g(x+x_1)$
$+f(y+y_1)+c=0$

i.e., $F_1=0$

This is a straight line. It is called the polar of P for the conic; P is called the pole of this line.

Note: 1. If the polar of A passes through B then the polar of B passes through A. Two such points are called a pair of conjugate points for the conic.

2. If the pole of a straight line L=0 lies on another straight line M=0 then the pole of M=0 lies on L=0. Two such lines are called a pair of conjugate lines for the conic.

Example: Find the locus of the poles of normal chords of the ellipse $\frac{x^2}{a^2}+\frac{y^2}{b^2}=1$

The normal at θ is

$$\frac{ax}{\cos\theta}-\frac{by}{\sin\theta}=a^2-b^2 \qquad \cdots (1)$$

Let P (x_1, y_1) be the poles of (1). The polar of P is

$$\frac{xx_1}{a^2}+\frac{yy_1}{b^2}=1 \qquad \cdots (2)$$

(1) and (2) are identical

$$\therefore \frac{\frac{x_1}{a^2}}{\frac{a}{\cos\theta}}=\frac{\frac{y_1}{b^2}}{\frac{-b}{\sin\theta}}=\frac{1}{a^2-b^2}$$

Eliminating θ we get the locus to be

$$\frac{a^6}{x^2}+\frac{b^6}{y^2}=(a^2-b^2)^2$$

ಅಂದರೆ, $ax_1x_2+h(x_1y_2+x_2y_1)+by_1y_2+g(x_1+x_2)$
$+f(y_1+y_2)+c=0$

$\therefore$ Q ಬಿಂದುವಿನ ಪಥ $axx_1+h(xy_1+x_1y)+byy_1$
$+g(x+x_1)+f(y+y_1)+c=0$

ಅಂದರೆ, $F_1=0$.

ಇದೊಂದು ಸರಳರೇಖೆ. ಇದರ ಹೆಸರು ಶಂಕುಜವನ್ನು ಕುರಿತು P ಯ ಧ್ರುವೀಯ. ಈ ರೇಖೆಯ ಧ್ರುವ P.

ಸೂಚನೆ : 1. A ಯ ಧ್ರುವೀಯ B ಮೂಲಕ ಸಾಗಿದರೆ B ಯ ಧ್ರುವೀಯ A ಮೂಲಕ ಸಾಗುವುದು. ಇಂಥ ಬಿಂದುಗಳಿಗೆ ಶಂಕುಜವನ್ನು ಕುರಿತು ಒಂದು ಜೊತೆ ಅನುವರ್ತಿ ಬಿಂದುಗಳೆಂದು ಹೆಸರು.

2. $L=0$ ಸರಳ ರೇಖೆಯ ಧ್ರುವ $M=0$ ಸರಳರೇಖೆಯ ಮೇಲೆ ಇದ್ದರೆ $M=0$ ಸರಳರೇಖೆಯ ಧ್ರುವ $L=0$ ಮೇಲಿರುವುದು. ಇಂಥ ಸರಳ ರೇಖೆಗಳಿಗೆ ಶಂಕುಜವನ್ನು ಕುರಿತು ಒಂದು ಜೊತೆ ಅನುವರ್ತಿ ರೇಖೆಗಳೆಂದು ಹೆಸರು.

ಉದಾಹರಣೆ : $\frac{x^2}{a^2}+\frac{y^2}{b^2}=1$ ದೀರ್ಘವೃತ್ತದ ಲಂಬಜ್ಯಾಗಳ ಧ್ರುವಗಳ ಪಥ ಕಂಡುಹಿಡಿಯಿರಿ.

θ ಬಿಂದುವಿನಲ್ಲಿ ಎಳೆದ ಜ್ಯಾದ ಸಮೀಕರಣ

$$\frac{ax}{\cos\theta}-\frac{by}{\sin\theta}=a^2-b^2 \qquad \cdots \quad (1)$$

ಸಮೀಕರಣ (1) ರ ಧ್ರುವ $P(x_1, y_1)$ ಆಗಿರಲಿ. ಆಗ P ಯ ಧ್ರುವೀಯ

$$\frac{xx_1}{a^2}+\frac{yy_1}{b^2}=1 \qquad \cdots \quad (2)$$

(1) ಮತ್ತು (2) ಸರ್ವಸಮವಾಗಿವೆ.

$$\therefore \quad \frac{\frac{x_1}{a^2}}{\frac{a}{\cos\theta}}=\frac{\frac{y_1}{b^2}}{\frac{-b}{\sin\theta}}=\frac{1}{a^2-b^2}$$

θ ವನ್ನು ವಿಸರ್ಜಿಸಿದರೆ $\frac{a^6}{x^2}+\frac{b^6}{y^2}=(a^2-b^2)^2$

ಇದೇ ಬೇಕಾದ ಪಥ.

1.14 Diameters of a conic. All straight lines passing through the centre of a conic are called its diameters. The portion of a diameter intercepted by the curve is the length of that diameter. The number of diameters of a central conic is infinite. In the case of a parabola since the centre is at infinity the diameters form a set of parallel lines all parallel to the axis.

The condition that $L \equiv lx+my+n=0$ should be a diameter of $F=0$ is that the centre of the conic must be on $L = 0$

$$\therefore \quad l(hf-bg)+m\,(gh-af)+n(ab-h^2) = 0$$

$$ab-h^2 \neq 0$$

The centre of $F = 0$ is given by $\dfrac{\partial F}{\partial x} = \dfrac{\partial F}{\partial y} = 0.$

$\therefore \quad \lambda \dfrac{\partial F}{\partial x} + \mu \dfrac{\partial F}{\partial y} = 0$ represents the diameters of $F=0$ for different values of λ and μ.

Two diameters of $F=0$ form a pair of conjugate diameters if the pole of the one lies on the other. Let

$$\lambda \frac{\partial F}{\partial x} + \mu \frac{\partial F}{\partial y} = 0 \qquad \cdots \quad (1)$$

$$\lambda' \frac{\partial F}{\partial x} + \mu' \frac{\partial F}{\partial y} = 0 \qquad \cdots \quad (2)$$

be a pair of conjugate diameters of $F=0$. Therefore the pole of either lies on the other. Let $P\,(x_1, y_1)$ be the pole of (1). Then $F_1=0$ and (1) are identical.

$$\therefore \quad x\,(a\lambda + h\mu) + y\,(h\lambda + b\mu) + (g\lambda + f\mu) = 0 \quad (1)$$

and $x \dfrac{\partial F}{\partial x_1} + y \dfrac{\partial F}{\partial y_1} + \dfrac{\partial F}{\partial \omega_1} = 0$ are identical.

$$\therefore \quad \frac{\dfrac{\partial F}{\partial x_1}}{a\lambda+h\mu} = \frac{\dfrac{\partial F}{\partial y_1}}{h\lambda+b\mu} = \frac{\dfrac{\partial F}{\partial \omega_1}}{g\lambda+f\mu} \qquad \cdots \quad (3)$$

೧.೧೪ ಶಂಕುಜದ ವ್ಯಾಸಗಳು

ಶಂಕುಜದ ಕೇಂದ್ರಕ್ಕಾಗಿ ಸಾಗುವ ಎಲ್ಲ ಸರಳ ರೇಖೆಗಳೂ ಅದರ ವ್ಯಾಸಗಳು. ಶಂಕುಜದ ವಕ್ರರೇಖೆಯಿಂದ ಸೀಮಿತಗೊಂಡ ವ್ಯಾಸದ ವಿಭಾಗ ಆ ವ್ಯಾಸದ ಉದ್ದ. ಒಂದು ಕೇಂದ್ರೀಯ ಶಂಕುಜದ ವ್ಯಾಸಗಳ ಸಂಖ್ಯೆ ಅನಂತ. ಪ್ಯರಾಬೊಲದ ಕೇಂದ್ರ ಅನಂತದಲ್ಲಿರುವುದರಿಂದ ಅದರ ವ್ಯಾಸಗಳು ಅಕ್ಷಕ್ಕೆ ಸಮಾನಾಂತರವಾಗಿರುವ ರೇಖೆಗಳ ಗಣ.

$L \equiv lx + my + n = 0$ ಸರಳರೇಖೆ $F = 0$ ಶಂಕುಜದ ವ್ಯಾಸವಾಗಬೇಕಾದರೆ ಶಂಕುಜದ ಕೇಂದ್ರ ಸರಳರೇಖೆಯ ಮೇಲೆ ಇರಬೇಕು.

$$\therefore \quad l(hf - bg) + m(gh - af) + n(ab - h^2) = 0$$

$$ab - h^2 \neq 0$$

$F = 0$ ಯ ಕೇಂದ್ರವನ್ನು ಕೊಡುವ ಸಮೀಕರಣಗಳು

$$\frac{\partial F}{\partial x} = \frac{\partial F}{\partial y} = 0$$

$\therefore \quad \lambda \dfrac{\partial F}{\partial x} + \mu \dfrac{\partial F}{\partial y} = 0$ ಈ ಸಮೀಕರಣ λ, μ ಗಳ ಎಲ್ಲ ಬೆಲೆಗಳಿಗೂ $F = 0$ ಯ ವ್ಯಾಸಗಳನ್ನು ನಿರ್ದೇಶಿಸುತ್ತದೆ.

$F = 0$ ಶಂಕುಜದ ಎರಡು ವ್ಯಾಸಗಳು ಒಂದು ಜೊತೆ ಅನುವರ್ತಿ ವ್ಯಾಸಗಳಾಗಬೇಕಾದರೆ ಒಂದರ ಧ್ರುವ ಇನ್ನೊಂದರ ಮೇಲೆ ಇರಬೇಕು.
$$\begin{pmatrix} 2(u-u') & 2(v-v') & 2(w-w') & d-d' \\ l & m & n & p \\ l' & m' & n' & p' \end{pmatrix}$$

ಎಂಬ ಮಾತೃಕೆಯ ದರ್ಜೆ 2.

ಅಂದವಾದ ಜ್ಯಾಮಿತೀಯ ವಿಧಾನದಿಂದ ಪ್ರಶ್ನೆಯನ್ನು ಚರ್ಚಿಸಬಹುದು. ಎರಡೂ ವೃತ್ತಗಳನ್ನು ಒಳಗೊಂಡ ಗೋಳ S ಆಗಿರಲಿ. $P_1 = 0$, $P_2 = 0$ ತಳಗಳ ಸಂಧಿರೇಖೆ S ನ್ನು L, M ಬಿಂದುಗಳಲ್ಲಿ ಸಂಧಿಸಲಿ. ಆದ್ದರಿಂದ ಈ ಬಿಂದು ಗಳು ಎರಡೂ ವೃತ್ತಗಳ ಮೇಲಿರುತ್ತವೆ. ಎಂದರೆ ದತ್ತ ವೃತ್ತಗಳು ಎರಡು ಬಿಂದು ಗಳಲ್ಲಿ ಸಂಧಿಸುತ್ತವೆ. ವಿಲೋಮವಾಗಿ ಬೇರೆ ಬೇರೆ ತಳಗಳಲ್ಲಿರುವ ಎರಡು ವೃತ್ತ ಗಳು C_1 ಮತ್ತು C_2 ಎರಡು ಬಿಂದುಗಳಲ್ಲಿ, L, M ಎನ್ನಿ, ಸಂಧಿಸಿದರೆ ವೃತ್ತಗಳು ಒಂದು ಗೋಳದ ಮೇಲಿರುತ್ತವೆ. ಹೇಗೆಂದರೆ C_1 ರ ಮೇಲೆ ಇನ್ನೊಂದು ಬಿಂದು Q ವನ್ನೂ C_2 ರ ಮೇಲೆ ಇನ್ನೊಂದು ಬಿಂದು R ನ್ನೂ ತೆಗೆದುಕೊಳ್ಳಿ. L, M, Q, R ಎಂಬ ನಾಲ್ಕು ಬಿಂದುಗಳ ಮೂಲಕ ಹೋಗುವ ಗೋಳಗಳು ಎರಡೂ ವೃತ್ತಗಳನ್ನು ಒಳಗೊಳ್ಳುತ್ತವೆ. ಆದ್ದರಿಂದ **ಬೇರೆ ಬೇರೆ ತಳಗಳಲ್ಲಿರುವ ಎರಡು ವೃತ್ತಗಳು ಒಂದೇ ಗೋಳದ ಮೇಲಿರಲು ಬೇಕಾದ ಮತ್ತು ಸಾಕಾದ ನಿರ್ಬಂಧವೇನೆಂದರೆ ವೃತ್ತಗಳು ಎರಡು ಬಿಂದುಗಳಲ್ಲಿ ಸಂಧಿಸಬೇಕು.**

ಅಭ್ಯಾಸಗಳು

1 (0, 0, 0), (1, 0, −1), (0, −1, 1), (−1, 1, 1) ಈ ನಾಲ್ಕು ಬಿಂದುಗಳ ಮೂಲಕ ಹೋಗುವ ಗೋಳದ ಸಮೀಕರಣವನ್ನು ಪಡೆಯಿರಿ.

2 $\dfrac{x}{a} + \dfrac{y}{b} + \dfrac{z}{c} = 1$ ತಳ ನಿರ್ದೇಶಕಾಕ್ಷಗಳನ್ನು A, B, C ಗಳಲ್ಲಿ ಸಂಧಿಸುತ್ತದೆ. A B C ವೃತ್ತದ ಸಮೀಕರಣಗಳನ್ನೂ ಅದರ ಕೇಂದ್ರದ ನಿರ್ದೇಶಕಗಳನ್ನೂ ಬರೆಯಿರಿ.

3 A plane passes through a fixed point (f, g, h) and cuts the coordinate axes in A, B, C. Show that the locus of the centre of the sphere OABC is the surface

$$\frac{f}{x} + \frac{g}{y} + \frac{h}{z} = 2.$$

4 Determine the condition that the plane

$$lx + my + nz + p = 0$$

touches the sphere $x^2 + y^2 + z^2 + 2ux + 2vy + 2wz + d = 0$ [Length of $\perp r$ from the centre on the plane = radius.]

5 If two spheres touch the distance between their centres is equal to the sum or difference of the radii.

6 The plane section common to two spheres is perpendicular to the line joining their centres.

7 Find the coordinates of the centre of the circle common to the spheres $x^2 + y^2 + z^2 + 2x - 4y - 2z - 5 = 0$, $x^2 + y^2 + z^2 - 4x + 6y + 2z - 7 = 0$.

8 The equations of any two spheres can be written in the form

$$x^2 + y^2 + z^2 + 2u_1x + d = 0, x^2 + y^2 + z^2 + 2u_2x + d = 0.$$

[Choose the line of centres as the x-axis and the radical plane as $x = 0$. The system of spheres $x^2 + y^2 + z^2 + 2ux + d = 0$ where u varies but d is the same for all spheres is a **coaxal** system the radical plane being the same for any two spheres]

9 If S_1, S_2 are two spheres $S_1 + \lambda S_2 = 0$ is the equation of a coaxal system.

10 The locus of a point the tangent from which to two given spheres are in a fixed ratio is a sphere coaxal with the given spheres.

3 ಒಂದು ತಳ (f, g, h) ಸ್ಥಿರ ಬಿಂದುವಿನ ಮೂಲಕ ಹೋಗುತ್ತ ನಿರ್ದೇಶಕಾಕ್ಷಗಳನ್ನು A, B, C ಗಳಲ್ಲಿ ಸಂಧಿಸುತ್ತದೆ. O A B C ಗೋಳದ ಕೇಂದ್ರದ ಪಥ $\frac{f}{x} + \frac{g}{y} + \frac{h}{z} = 2$ ಎಂಬ ಮೈ ಎಂದು ಸಾಧಿಸಿ.

4 $x^2 + y^2 + z^2 + 2ux + 2vy + 2wz + d = 0$ ಗೋಳವನ್ನು $lx + my + nz + p = 0$ ತಳ ಸ್ಪರ್ಶಿಸಲು ಬೇಕಾದ ನಿರ್ಬಂಧವನ್ನು ಪಡೆಯಿರಿ.

[ಕೇಂದ್ರದಿಂದ ಮೈಗೆ ಎಳೆದ ಲಂಬದ ಉದ್ದ = ತ್ರಿಜ್ಯ]

5 ಎರಡು ಗೋಳಗಳು ಸ್ಪರ್ಶಿಸಿದರೆ ಅವುಗಳ ಕೇಂದ್ರಗಳ ನಡುವಣದೂರ ತ್ರಿಜ್ಯಗಳ ಮೊತ್ತ ಇಲ್ಲವೇ ಅಂತರವಾಗಿರುತ್ತದೆ.

6 ಎರಡು ಗೋಳಗಳ ಸಾಮಾನ್ಯ ಛೇದತಳ ಕೇಂದ್ರರೇಖೆಗೆ ಲಂಬವಾಗಿರುತ್ತದೆ.

7 $x^2 + y^2 + z^2 + 2x - 4y - 2z - 5 = 0$, $x^2 + y^2 + z^2 - 4x + 6y + 2z - 7 = 0$ ಗೋಳಗಳಿಗೆ ಸಾಮಾನ್ಯವಾಗಿರುವ ವೃತ್ತದ ಕೇಂದ್ರದ ನಿರ್ದೇಶಕಗಳನ್ನು ಪಡೆಯಿರಿ.

8 ಯಾವುದೇ ಎರಡು ಗೋಳಗಳ ಸಮೀಕರಣಗಳನ್ನು
$x^2 + y^2 + z^2 + 2u_1 x + d = 0$, $x^2 + y^2 + z^2 + 2u_2 x + d = 0$ ಎಂಬ ರೂಪದಲ್ಲಿ ಬರೆಯಬಹುದು.

[ಕೇಂದ್ರರೇಖೆಯನ್ನು x—ಅಕ್ಷವಾಗಿಯೂ ಮೂಲತಳವನ್ನು $x = 0$ ಆಗಿಯೂ ಆರಿಸಿಕೊಳ್ಳಿ. ಎಲ್ಲ ಗೋಳಗಳಿಗೂ d ಒಂದೇ ಆಗಿದ್ದು u ಮಾತ್ರ ಬದಲಾಗುವ $x^2 + y^2 + z^2 + 2ux + d = 0$ ಎಂಬ ಗೋಳ ವ್ಯೂಹಕ್ಕೆ **ಸಹಮೂಲಾಕ್ಷ ವ್ಯೂಹ** ವೆಂದು ಹೆಸರು. ಇದರ ಯಾವುದೇ ಎರಡು ಗೋಳಗಳಿಗೆ ಮೂಲತಳ ಒಂದೇ ಆಗಿರುತ್ತದೆ.]

9 S_1, S_2 ಎರಡು ಗೋಳಗಳಾದರೆ, $S_1 + \lambda S_2 = 0$ ಎಂಬುದು ಒಂದು ಸಹಮೂಲಾಕ್ಷ ವ್ಯೂಹದ ಸಮೀಕರಣ.

10 ಒಂದು ಬಿಂದುವಿನಿಂದ ಎರಡು ದತ್ತ ವ್ಯೂಹಗಳಿಗೆ ಎಳೆದ ಸ್ಪರ್ಶರೇಖೆಗಳ ಅಳತೆಗಳು ಒಂದು ಸ್ಥಿರ ನಿಷ್ಪತ್ತಿಯನ್ನು ಹೊಂದಿರುವುದಾದರೆ ಬಿಂದುವಿನ ಪಥ ದತ್ತ ಗೋಳಗಳೊಡನೆ ಸಹಮೂಲಾಕ್ಷವುಳ್ಳ ಒಂದು ಗೋಳ.

11 Prove that the coaxal system in Ex. 8 has two spheres of zero radius **(limiting points)**, whose coordinates are $(\pm\sqrt{d}, 0, 0)$.

12 Prove that the equation of any sphere through the limiting points of Ex. 11 is of the form $x^2 + y^2 + z^2 + 2By + 2Cz - d = 0$ and that this cuts all the coaxal spheres orthogonally.

13 Find the equations to the two spheres which pass through the circle $x^2 + y^2 + z^2 = 5$, $x + 2y + 3z = 3$ and touch the plane $4x + 3y = 15$.

14 Find the locus of the centres of spheres passing through the origin and touching the plane $x + y + z = 5$.

15 OA, OB, OC are mutually perpendicular lines through the origin and their direction cosines are (l_r, m_r, n_r), $r = 1, 2, 3$ respectively. If $OA = a$, OB b, $OC = c$ prove that the equation to the sphere OABC is

$$x^2 + y^2 + z^2 - x(al_1 + bl_2 + cl_3) - y(am_1 + bm_2 + cm_3) - z(an_1 + bn_2 + cn_3) = 0.$$

16 Prove that the circles

$$x^2 + y^2 + z^2 - 2x + 3y - 4z - 6 = 0$$
$$3x + 2y - 3z + 5 = 0$$
$$x^2 + y^2 + z^2 - 3x - y - 3z - 4 = 0$$
$$2x - 2y - 2z + 7 = 0$$

lie on a sphere. Find its equation.

17 Prove that in general there is one and only one sphere S which cuts four spheres S_1, S_2, S_3, S_4 orthogonally and that S cuts every sphere of the system $S_1 + kS_2 + lS_3 + mS_4 = 0$ orthogonally.

11 ಉದಾ : 8 ರಲ್ಲಿನ ಸಮಮೂಲಾಕ್ಷ ವ್ಯೂಹದಲ್ಲಿ ತ್ರಿಜ್ಯ ಶೂನ್ಯವಾಗಿರುವ ಎರಡು ಗೋಳಗಳಿವೆ (ಇವಕ್ಕೆ ಪರಮಾವಧಿ ಬಿಂದುಗಳು ಎಂದು ಹೆಸರು) ಎಂದೂ ಇವುಗಳ ನಿರ್ದೇಶಕಗಳು $(\pm\sqrt{d}, 0, 0)$ ಎಂದೂ ಸಾಧಿಸಿ.

12 ಉದಾ : 11 ರಲ್ಲಿನ ಪರಮಾವಧಿ ಬಿಂದುಗಳ ಮೂಲಕ ಯಾವುದೇ ಗೋಳದ ಸಮೀಕರಣ $x^2+y^2+z^2+2By+2Cz-d=0$ ಎಂಬ ರೂಪದಲ್ಲಿದೆ. ಈ ಗೋಳ ಸಮಮೂಲಾಕ್ಷ ವ್ಯೂಹದ ಗೋಳಗಳನ್ನೆಲ್ಲ ಲಂಬವಾಗಿ ಛೇದಿಸುತ್ತದೆ.

13 $x^2+y^2+z^2=5$, $x+2y+3z=3$ ವೃತ್ತದ ಮೂಲಕ ಹೋಗಿ $4x+3y=15$ ತಳವನ್ನು ಸ್ಪರ್ಶಿಸತಕ್ಕ ಎರಡು ಗೋಳಗಳ ಸಮೀಕರಣಗಳನ್ನು ಪಡೆಯಿರಿ.

14 ಮೂಲಬಿಂದುವಿನ ಮೂಲಕ ಹೋಗಿ $x+y+z=5$ ತಳವನ್ನು ಸ್ಪರ್ಶಿಸತಕ್ಕ ಗೋಳಗಳ ಕೇಂದ್ರಗಳ ಪಥವನ್ನು ಪಡೆಯಿರಿ.

15 OA, OB, OC ಎಂಬವು ಮೂಲಬಿಂದುವಿನ ಮೂಲಕ ಹೋಗುವ ಪರಸ್ಪರ ಲಂಬ ರೇಖೆಗಳು. ಇವುಗಳ ದಿಕ್ಕೋಟಿಜ್ಯಾಗಳು ಅನುಕ್ರಮವಾಗಿ (l_r, m_r, n_r), $r = 1, 2, 3$. $OA = a$, $OB = b$, $OC = c$ ಆದರೆ OABC ಗೋಳದ ಸಮೀಕರಣ

$$x^2+y^2+z^2-x(al_1+bl_2+cl_3)-y(am_1+bm_2+cm_3)$$
$$-z(an_1+bn_2+cn_3)=0$$ ಎಂದು ತೋರಿಸಿ.

16 $x^2+y^2+z^2-2x+3y-4z-6=0$

$3x+2y-3z+5=0$

$x^2+y^2+z^2-3x-y-3z-4=0$

$2x-2y-2z+7=0$

ವೃತ್ತಗಳು ಒಂದೇ ಗೋಳದ ಮೇಲಿವೆ ಎಂದು ತೋರಿಸಿ. ಅದರ ಸಮೀಕರಣವನ್ನು ಪಡೆಯಿರಿ.

17 ಸಾಮಾನ್ಯವಾಗಿ, ನಾಲ್ಕು ದತ್ತ ಗೋಳಗಳಾದ S_1, S_2, S_3, S_4 ನ್ನು ಲಂಬವಾಗಿ ಛೇದಿಸತಕ್ಕ ಒಂದು ಮತ್ತು ಒಂದೇ ಗೋಳ S ಇರುತ್ತದೆಯೆಂದೂ S ಗೋಳ $S_1+kS_2+lS_3+mS_4=0$ ವ್ಯೂಹದ ಎಲ್ಲ ಗೋಳಗಳನ್ನೂ ಲಂಬವಾಗಿ ಛೇದಿಸುತ್ತದೆಂದೂ ಸಾಧಿಸಿ.

18 If the sphere $x^2+y^2+z^2+2ux+2vy+2wz+d=0$ cuts the sphere $x^2+y^2+z^2+2u'x+2v'y+2w'z+d'=0$ along a great circle of the latter prove that

$$2(uu'+vv'+ww')=d+d'+2r'^2$$

where r' is the radius of the latter sphere.

[The plane of the common section must pass through the centre of the second sphere]

19 Find the equation of the sphere having the circle

$$x^2+y^2+z^2-2x+3y-5z+2=0=3x-y+2z-6$$

as a great circle.

20 Prove that the circumsphere of the tetrahedron formed by the four planes $x=0$, $y=0$, $z=0$, $lx+my+nz+k=0$ is given by the equation

$$x^2+y^2+z^2+k\left(\frac{x}{l}+\frac{y}{m}+\frac{z}{n}\right)=0$$

[Compare with Ex. 2]

21 Find the equation of the sphere circumscribing the tetrahedron whose vertices are O (0, 0, 0), A (a, 0, 0), B (0, b, 0), and C (0, 0, c). If S is the centre of this sphere prove that the sphere on OS as diameter passes through the middle points of the six edges of the tetrahedron OABC.

22 Prove that the condition that five given points (x_r, y_r, z_r), $r=1,\dots,5$ lie on a sphere is that

$$\begin{vmatrix} x_1^2+y_1^2+z_1^2 & x_1 & y_1 & z_1 & 1 \\ \cdots & \cdots & \cdots & \cdots & \cdots \\ x_5^2+y_5^2+z_5^2 & x_5 & y_5 & z_5 & 1 \end{vmatrix}=0$$

Rewrite this as

$$\begin{vmatrix} 1 & -2x_1 & -2y_1 & -2z_1 & x_1^2+y_1^2+z_1^2 \\ \cdots & \cdots & \cdots & \cdots & \cdots \\ 1 & -2x_5 & -2y_5 & -2z_5 & x_5^2+y_5^2+2z_5^2 \end{vmatrix}=0$$

Multiplying the two determinants obtain the condition in the form

18 $x^2+y^2+z^2+2ux+2vy+2wz+d=0$ ಗೋಳ $x^2+y^2+z^2+2u'x+2v'y+2w'z+d'=0$ ಗೋಳವನ್ನು ಇದರ ಮಹಾವೃತ್ತವೊಂದರಲ್ಲಿ ಛೇದಿಸಿದರೆ

$2(uu'+vv'+ww')=d+d'+2r'^2$ (r' = ಎರಡನೆಯ ಗೋಳದ ತ್ರಿಜ್ಯ) ಎಂದು ತೋರಿಸಿ.

[ಛೇದದ ತಳ ಎರಡನೆಯ ಗೋಳದ ಕೇಂದ್ರದ ಮೂಲಕ ಹೋಗಬೇಕು.]

19 $x^2+y^2+z^2-2x+3y-5z+2=0=3x-y+2z-6$ ವೃತ್ತವನ್ನು ಮಹಾವೃತ್ತವಾಗಿ ಉಳ್ಳ ಗೋಳದ ಸಮೀಕರಣವನ್ನು ಪಡೆಯಿರಿ.

20 $x=0,\ y=0,\ z=0,\ lx+my+nz+k=0$ ಎಂಬ ನಾಲ್ಕು ತಳಗಳಿಂದ ಆಗುವ ಚತುಷ್ಫಲಕದ ಪರಿಗೋಳದ ಸಮೀಕರಣ

$$x^2+y^2+z^2+k\left(\frac{x}{l}+\frac{y}{m}+\frac{z}{n}\right)=0$$ ಎಂದು ತೋರಿಸಿ.

[ಉದಾ : 2 ರೊಡನೆ ಹೋಲಿಸಿ.]

21 O (0, 0, 0), A (a, 0, 0), B (0, b, 0), C (0, 0, c) ಶೃಂಗಗಳನ್ನಾಗಿ ಉಳ್ಳ ಚತುಷ್ಫಲಕದ ಪರಿಗೋಳದ ಸಮೀಕರಣವನ್ನು ಪಡೆಯಿರಿ. ಈ ಗೋಳದ ಕೇಂದ್ರ S ಆದರೆ O S ವ್ಯಾಸವಾಗಿ ಉಳ್ಳ ಗೋಳ OABC ಚತುಷ್ಫಲಕದ ಆರು ಬಾಹುಗಳ ಮಧ್ಯ ಬಿಂದುಗಳ ಮೂಲಕ ಹೋಗುತ್ತದೆಂದು ಸಾಧಿಸಿ.

22 ಐದು ದತ್ತ ಬಿಂದುಗಳು (x_r, y_r, z_r), $r=1,\cdots,5$ ಒಂದು ಗೋಳದ ಮೇಲಿರಲು ಬೇಕಾದ ನಿರ್ಬಂಧ

$$\begin{vmatrix} x_1^2+y_1^2+z_1^2 & x_1 & y_1 & z_1 & 1 \\ \cdots & \cdots & \cdots & \cdots & \cdots \\ x_5^2+y_5^2+z_5^2 & x_5 & y_5 & z_5 & 1 \end{vmatrix} = 0$$

ಎಂದು ತೋರಿಸಿ. ಇದನ್ನು

$$\begin{vmatrix} 1 & -2x_1 & -2y_1 & -2z_1 & x_1^2+y_1^2+z_1^2 \\ \cdots & \cdots & \cdots & \cdots & \cdots \\ 1 & -2x_5 & -2y_5 & -2z_5 & x_5^2+y_5^2+z_5^2 \end{vmatrix} = 0$$

ಎಂದು ಬರೆದು, ಎರಡೂ ನಿರ್ಧಾರಕಗಳನ್ನು ಗುಣಿಸಿ, ನಿರ್ಬಂಧವನ್ನು ಕೆಳಗಿನಂತೆ ಬರೆಯಿರಿ

$$\begin{vmatrix} 0 & d_{12}^2 & d_{13}^2 & d_{14}^2 & d_{15}^2 \\ d_{21}^2 & 0 & d_{23}^2 & d_{24}^2 & d_{25}^2 \\ \cdots & \cdots & \cdots & \cdots & \cdots \\ d_{51}^2 & d_{52}^2 & d_{53}^2 & d_{54}^2 & 0 \end{vmatrix} = 0$$

where d_{rs} is the distance between the points (x_r, y_r, z_r) and (x_s, y_s, z_s).

23 If two spheres S_1 and S_2 are orthogonal prove that the polar plane of any point P on S_1 w.r.t. S_2 passes through the other end of the diameter of S_1 through P.

[The polar plane is defined on lines similar to the polar of a point w.r.t. a circle]

$$\begin{vmatrix} 0 & d_{12}^2 & d_{13}^2 & d_{14}^2 & d_{15}^2 \\ d_{21}^2 & 0 & d_{23}^2 & d_{24}^2 & d_{25}^2 \\ \cdots & \cdots & \cdots & \cdots & \cdots \\ d_{51}^2 & d_{52}^2 & d_{53}^2 & d_{54}^2 & 0 \end{vmatrix} = 0,$$

ಇಲ್ಲಿ (x_r, y_r, z_r) ಮತ್ತು (x_s, y_s, z_s) ಬಿಂದುಗಳ ನಡುವೆ ಇರುವ ದೂರವನ್ನು d_{rs} ಎಂದು ಕರೆದಿದ್ದೇವೆ.

23 S_1, S_2 ಗೋಳಗಳು ಲಂಬವಾಗಿದ್ದರೆ S_1 ರ ಮೇಲಣ ಯಾವುದೇ ಬಿಂದು P ಗೆ S_2 ನ್ನು ಕುರಿತ ಧ್ರುವೀಯ ತಳ P ಮೂಲಕ ಹೋಗುವ S_1ರ ವ್ಯಾಸದ ಇನ್ನೊಂದು ತುದಿಯ ಮೂಲಕ ಹೋಗುತ್ತದೆ ಎಂದು ಸಾಧಿಸಿ.

[ವೃತ್ತಕ್ಕೆ ಒಂದು ಬಿಂದುವಿನ ಧ್ರುವೀಯವನ್ನು ವ್ಯಾಖ್ಯಿಸುವಂತೆಯೇ ಇಲ್ಲಿ ಧ್ರುವೀಯ ತಳವನ್ನು ವ್ಯಾಖ್ಯಿಸಿಕೊಳ್ಳಬೇಕು.]

CHAPTER 8

THE CONE

8.1 Let all the points of a curve (closed or open) be joined to a fixed point. The surface obtained is called a cone, and the fixed point is the **vertex** of the cone. The given curve is the **base-curve.** We may take a plane section of this cone as the base-curve, since this generates the same cone. The vertex however is considered as a point outside the plane of the curve.

Let the vertex be taken as the origin of coordinates. If P (x, y, z) is a point on the cone (kx, ky, kz) are the coordinates of another point on the generator OP. Hence, if the equation of the cone is $F(x, y, z) = 0$, the equation $F(kx, ky, kz) = 0$ must also be true, for all values of k. This is possible only if $F(x, y, z)$ is homogeneous in x, y, z. Conversely, by the same argument, a homogeneous equation $F(x, y, z) = 0$ represents a cone with vertex O. The cone is said to be of degree n if $F(x, y, z)$ is homogeneous of degree n. Putting $z = c$, this gives an equation of degree n in x, y. Hence any plane section is a curve of the nth degree.

We shall be generally dealing with quadric or second-degree cones. Any plane section gives a plane curve of the second degree, *i.e.*, a conic. It can be proved that this conic may be an ellipse, parabola or hyperbola according to the position of the plane. It may also be a circle. If the plane passes through the vertex of the cone, the section is a pair of lines. For if P is any point on the section, the line OP must form part of the section. When the two line

ಅಧ್ಯಾಯ ೮

ಶಂಕು

೮.೧ ಒಂದು ವಕ್ರರೇಖೆಯ (ಆವೃತವಾಗಿರಲಿ, ಅನಾವೃತವಾಗಿರಲಿ) ಬಿಂದುಗಳನ್ನೆಲ್ಲ ಒಂದು ಸ್ಥಿರ ಬಿಂದುವಿಗೆ ಸೇರಿಸಿದರೆ ಉಂಟಾಗುವ ಮೇಲ್ಮೈಗೆ **ಶಂಕು** ಎಂದು ಹೆಸರು. ಸ್ಥಿರ ಬಿಂದು ಶಂಕುವಿನ ಶೃಂಗ. ದತ್ತರೇಖೆ **ಮೂಲರೇಖೆ.** ಮೂಲರೇಖೆಯನ್ನು ಈ ಶಂಕುವಿನ ತಳಛೇದವಾಗಿ ತೆಗೆದುಕೊಳ್ಳಬಹುದು, ಏಕೆಂದರೆ ಈ ಛೇದವೂ ಅದೇ ಶಂಕುವನ್ನು ಕೊಡುತ್ತದೆ. ಶೃಂಗವನ್ನು ಮಾತ್ರ ಈ ರೇಖೆಯ ತಳದ ಹೊರಗಿರುವ ಬಿಂದು ಎಂದು ಗಣಿಸುತ್ತೇವೆ.

ಶೃಂಗವನ್ನು ನಿರ್ದೇಶಕಗಳ ಮೂಲ ಬಿಂದುವನ್ನಾಗಿ ತೆಗೆದುಕೊಂಡರೆ, ಶಂಕುವಿನ ಮೇಲಣ ಬಿಂದುವೊಂದು P (x, y, z) ಆದರೆ, ಜನಕರೇಖೆ OP ಯ ಮೇಲೆ (kx, ky, kz) ಇನ್ನೊಂದು ಬಿಂದುವಿನ ನಿರ್ದೇಶಕಗಳು. ಆದ್ದರಿಂದ ಶಂಕುವಿನ ಸಮೀಕರಣ $F(x, y, z) = 0$ ಆದರೆ, $F(kx, ky, kz) = 0$ ಸಮೀಕರಣವೂ k ಯ ಎಲ್ಲ ಬೆಲೆಗಳಿಗೂ ನಿಜವಿರಬೇಕು. $F(x, y, z)$ ಉತ್ಪನ್ನ x, y, z ಗಳಲ್ಲಿ ಸಮಘಾತೀಯವಾದುದಾದರೆ ಮಾತ್ರ ಇದು ಸಾಧ್ಯ. ವಿಲೋಮವಾಗಿ, ಇದೇ ತರ್ಕದಂತೆ, ಸಮಘಾತದ ಯಾವುದೇ ಸಮೀಕರಣ $F(x, y, z) = 0$ ಶೃಂಗ O ಆಗಿ ಉಳ್ಳ ಒಂದು ಶಂಕುವನ್ನು ಕೊಡುತ್ತದೆ. $F(x, y, z) = 0$ n ಡಿಗ್ರಿಯಲ್ಲಿ ಸಮಘಾತೀಯವಾಗಿದ್ದರೆ, ಶಂಕು n ಡಿಗ್ರಿಯದು ಎನ್ನುತ್ತೇವೆ. ಇದರಲ್ಲಿ $z=c$ ಎಂದು ಹಾಕಿದರೆ, ಇದು x, y ಗಳಲ್ಲಿ n ಡಿಗ್ರಿಯ ಸಮೀಕರಣವನ್ನು ಕೊಡುತ್ತದೆ. ಎಂದರೆ ಯಾವುದೇ ತಳ ಛೇದ n ಡಿಗ್ರಿಯ ರೇಖೆ.

ಸಾಮಾನ್ಯವಾಗಿ ನಾವು ಎರಡನೆಯ ಡಿಗ್ರಿಯ ಶಂಕುಗಳನ್ನು ಮಾತ್ರ ಬಳಸುವೆವು. ಯಾವುದೇ ತಳಛೇದ ಎರಡನೆಯ ಡಿಗ್ರಿಯ ಸಮತಳ ರೇಖೆಯನ್ನು ಎಂದರೆ ಒಂದು ಶಂಕುಜವನ್ನು ಕೊಡುತ್ತದೆ. ತಳದ ಸ್ಥಾನಕ್ಕನುಗುಣವಾಗಿ ಈ ಶಂಕುಜ ದೀರ್ಘವೃತ್ತವೋ ಪ್ಯರಾಬೊಲವೊ ಹೈಪರ್‌ಬೊಲವೋ ಆಗಿರಬಹುದೆಂದು ಸಾಧಿಸಬಹುದು. ವೃತ್ತವೂ ಆಗಿರಬಹುದು. ತಳ ಶಂಕುವಿನ ಮೂಲಕ ಹೋದರೆ, ಛೇದ ಒಂದು ಸರಳರೇಖಾಯುಗ್ಮ, ಏಕೆಂದರೆ ಛೇದದ ಮೇಲೆ P ಯಾವುದೇ ಬಿಂದುವಾದರೆ, OP ಸರಳರೇಖೆ ಛೇದದ ಒಂದು ಭಾಗವಾಗಿರಬೇಕು. ಎರಡು

coincide, the plane is said to be a tangent plane. It touches the cone along the entire length of these coincident lines.

Joining the points on the circumference of a circle, to a point on the normal to the plane of the circle through its centre, we obtain a **right circular cone.** If O be the vertex of the cone, C the centre of the circle and P any point on the circle, the angle $C\hat{O}P$ is constant, being equal to $\tan^{-1}\frac{r}{h}$, where r is the radius of the circle, and h is CO, the height of the cone. This angle is called the semi-vertical angle of the cone.




Fig. 8.1

The right circular cone can be obtained by rotating the hypotenuse OP of the triangle OCP about the axis OC. It is thus a **cone of revolution.**


8.2 The lines joining the vertex to the points of the base-curve are called the generators of the cone. If $F(x, y, z) = 0$ is the equation of the cone and $\frac{x}{l} = \frac{y}{m} = \frac{z}{n}$ the equations of a generator the equation $F(lr, mr, nr) = 0$ is satisfied for all values of r. Hence $F(l, m, n) = 0$, is a relation between the direction cosises of the generator. Conversely, given this relation between the direction cosines, the corresponding line through O generates the cone whose equation is $F(x, y, z) = 0$.

We shall be dealing with cones of the second degree only. If the vertex is the origin, the equation of the cone is given by the general homogeneous equation of the second degree in x, y, z, viz.,

$$ax^2 + by^2 + cz^2 + 2fyz + 2gzx + 2hxy = 0$$

ರೇಖೆಗಳೂ ಐಕ್ಯವಾದರೆ, ತಳವನ್ನು ಸ್ಪರ್ಶತಳವೆನ್ನುವೆವು. ಇದು ಶಂಕುವನ್ನು ಐಕ್ಯವಾಗುವ ರೇಖೆಗಳ ಉದ್ದಕ್ಕೂ ಸ್ಪರ್ಶಿಸುತ್ತದೆ.

ಒಂದು ವೃತ್ತದ ಪರಿಧಿಯ ಮೇಲಿರುವ ಬಿಂದುಗಳನ್ನು ವೃತ್ತದ ತಳಕ್ಕೆ ಅದರ ಕೇಂದ್ರದ ಮೂಲಕ ಎಳೆದ ಲಂಬದ ಮೇಲೆ ಯಾವುದಾದರೂ ಒಂದು ಬಿಂದುವಿಗೆ ಸೇರಿಸಿದರೆ, **ಒಂದು ಲಂಬವೃತ್ತೀಯ ಶಂಕು** ಒದಗುತ್ತದೆ. ಈ ಶಂಕುವಿನ ಶೃಂಗ ವೃತ್ತದ ಕೇಂದ್ರ C ಆಗಿದ್ದು, ವೃತ್ತದ ಮೇಲೆ ಯಾವುದೇ ಬಿಂದು P ಆದರೆ, COP ಕೋನ ಸ್ಥಿರ. ವೃತ್ತದ ತ್ರಿಜ್ಯ $= r$, CO $= h$, ಶಂಕುವಿನ ಎತ್ತರ ಆದರೆ, ಈ ಕೋನ $= \tan^{-1}\dfrac{r}{h}$. ಈ ಕೋನಕ್ಕೆ ಶಂಕುವಿನ **ಶೃಂಗಾರ್ಧ ಕೋನ** ಎಂದು ಹೆಸರು.



ಚಿತ್ರ ೮.೧

OCP ತ್ರಿಭುಜದ ಕರ್ಣ OP ಯನ್ನು OC ಅಕ್ಷದ ಸುತ್ತ ಪರಿಭ್ರಮಿಸುವುದರಿಂದ ಮೇಲಣ ಲಂಬವೃತ್ತೀಯ ಶಂಕು ಉತ್ಪನ್ನವಾಗುತ್ತದೆ. ಆದ್ದರಿಂದ ಇದು ಒಂದು **ಭ್ರಮಣ ಶಂಕು.**

೮.೨ ಶೃಂಗವನ್ನು ಮೂಲ ರೇಖೆಯ ಬಿಂದುಗಳಿಗೆ ಸೇರಿಸುವ ರೇಖೆಗಳಿಗೆ ಶಂಕುವಿನ ಜನಕ ರೇಖೆಗಳೆಂದು ಹೆಸರು. ಶಂಕುವಿನ ಸಮೀಕರಣ $F(x, y, z) = 0$ ಆಗಿ ಜನಕರೇಖೆಯೊಂದರ ಸಮೀಕರಣಗಳು $\dfrac{x}{l} = \dfrac{y}{m} = \dfrac{z}{n}$ ಆದರೆ, $F(lr, mr, n) = 0$ ಸಮೀಕರಣ r ನ ಎಲ್ಲ ಬೆಲೆಗಳಿಗೂ ಸರಿಯಿರುತ್ತದೆ. ಆದ್ದರಿಂದ $F(l, m, n) = 0$ ಇದು ಜನಕರೇಖೆಯ ದಿಕ್ಕೋಟಿಜ್ಯಾಗಳ ನಡುವೆ ಇರುವ ಸಂಬಂಧ. ವಿಲೋಮವಾಗಿ ದಿಕ್ಕೋಟಿಜ್ಯಾಗಳಿಗೆ ಈ ಸಂಬಂಧವಿದ್ದರೆ, O ಮೂಲಕ ಹೋಗುವ ಅಂಥ ರೇಖೆ $F(x, y, z) = 0$ ಸಮೀಕರಣವಾಗಿ ಉಳ್ಳ ಶಂಕುವನ್ನು ಜನಕಿಸುತ್ತದೆ.

ಎರಡನೆಯ ಡಿಗ್ರಿಯ ಶಂಕುಗಳನ್ನು ಮಾತ್ರ ಕುರಿತು ಹೇಳುವೆವು. ಶೃಂಗ ಮೂಲ ಬಿಂದುವಾದರೆ, ಶಂಕುವಿನ ಸಮೀಕರಣ x, y, z ಗಳಲ್ಲಿ ಎರಡನೆಯ ಡಿಗ್ರಿಯ ಸಾರ್ವತ್ರಿಕ ಸಮೀಕರಣ, ಎಂದರೆ

$$ax^2 + by^2 + cz^2 + 2fyz + 2gzx + 2hxy = 0$$

It follows that a cone of the second degree can be determined so as to pass through five concurrent lines. For if the direction cosines of the lines are (l_r, m_r, n_r), $r = 1, 2, 3, 4, 5$ we obtain 5 relations

$$al_r^2 + bm_r^2 + cn_r^2 + 2fm_r n_r + 2gn_r l_r + 2hl_r m_r = 0$$
$$r = 1, 2, 3, 4, 5$$

These give solutions for $a : b : c : f : g : h$.

8.3 The equation of a cone of the second degree which passes through the coordinate axes is of the form

$$fyz + gzx + hxy = 0.$$

For, the equations of Ox are $\dfrac{x}{1} = \dfrac{y}{0} = \dfrac{z}{0}$. The direction cosines $(1, 0, 0)$ satisfy $ax^2 + by^2 + cz^2 + 2fyz + 2gzx + 2hxy = 0$, only if $a = 0$. Similarly, $b = 0$, $c = 0$.

A cone of the second degree can be drawn so as to pass through two sets of three mutually perpendicular lines through the origin.

Choose one set as the coordinate axes, so that the equation of the cone passing through these lines is of the form

$$fyz + gzx + hxy = 0$$

Let (l_r, m_r, n_r), $r = 1, 2, 3$ be the direction cosines of the other three lines. These lie on the cone if

$$fm_1 n_1 + gn_1 l_1 + hl_1 m_1 = 0$$
$$fm_2 n_2 + gn_2 l_2 + hl_2 m_2 = 0$$
$$fm_3 n_3 + gn_3 l_3 + hl_3 m_3 = 0$$

But, the relations between the direction cosines of three mutually perpendicular lines include

$$m_1 n_1 + m_2 n_2 + m_3 n_3 = 0,$$

and two similar equations.

ಆದ್ದರಿಂದ ಐದು ಸಂಪಾತ ರೇಖೆಗಳ ಮೂಲಕ ಹೋಗುವಂತೆ ಎರಡನೆಯ ಡಿಗ್ರಿಯ ಒಂದು ಶಂಕುವನ್ನು ನಿರ್ಧರಿಸಬಹುದು. ಏಕೆಂದರೆ, ಈರೇಖೆಗಳ ದಿಕ್ಕೋಟಿಜ್ಯಾಗಳು

(l_r, m_r, n_r), $r = 1, 2, 3, 4, 5$ ಆದರೆ

$$al_r^2 + bm_r^2 + cn_r^2 + 2fm_r n_r + 2g n_r l_r + 2h l_r m_r = 0, \quad r = 1, 2, 3, 4, 5$$

ಎಂಬ ಐದು ಸಂಬಂಧಗಳು ದೊರೆಯುತ್ತವೆ. ಇವುಗಳಿಂದ $a : b : c : f : g : h$ ಗಳನ್ನು ಬಿಡಿಸಬಹುದು.

೮.೩. ನಿರ್ದೇಶಕಾಕ್ಷಗಳ ಮೂಲಕ ಹೋಗುವ ಎರಡನೆಯ ಡಿಗ್ರಿಯ ಶಂಕುವಿನ ಸಮೀಕರಣ $fyz + gzx + h\,xy = 0$ ಎಂಬ ರೂಪವನ್ನು ತಾಳುತ್ತದೆ. ಏಕೆಂದರೆ, ox ನ ಸಮೀಕರಣಗಳು $\frac{x}{1} = \frac{y}{0} = \frac{z}{0}$.

ಇದರ ದಿಕ್ಕೋಟಿಜ್ಯಾಗಳು (1, 0, 0). ಇವು $ax^2 + by^2 + cz^2 + 2fyz + 2gzx + 2hxy = 0$ ಸಮೀಕರಣವನ್ನು ಸರಿದೂಗಿಸಬೇಕಾದರೆ $a = 0$ ಆಗಬೇಕು. ಹೀಗೆಯೇ $b = 0$, $c = 0$

ಮೂಲ ಬಿಂದುವಿನಲ್ಲಿ ಪರಸ್ಪರ ಲಂಬವಾಗಿರುವ ಮೂರು ರೇಖೆಗಳ ಎರಡು ಗಣಗಳ ಮೂಲಕ ಹೋಗುವಂತೆ ಒಂದು ಎರಡನೆಯ ಡಿಗ್ರಿಯ ಶಂಕುವನ್ನು ರಚಿಸಬಹುದು.

ಇವುಗಳಲ್ಲಿ ಒಂದು ಗಣವನ್ನು ನಿರ್ದೇಶಕಾಕ್ಷಗಳನ್ನಾಗಿ ಆರಿಸಿಕೊಳ್ಳಿ. ಆದ್ದರಿಂದ, ಇವುಗಳ ಮೂಲಕ ಹೋಗುವ ಶಂಕುವಿನ ಸಮೀಕರಣ $fyz + gzx + hxy = 0$ ಎಂಬ ರೂಪವುಳ್ಳದು. ಇನ್ನು ಮೂರು ರೇಖೆಗಳ ದಿಕ್ಕೋಟಿಜ್ಯಾಗಳು (l_r, m_r, n_r), $r = 1, 2, 3$ ಆಗಿರಲಿ. ಇವು ಶಂಕುವಿನ ಮೇಲಿರಬೇಕಾದರೆ

$$f m_1 n_1 + g n_1 l_1 + h l_1 m_1 = 0$$
$$f m_2 n_2 + g n_2 l_2 + h l_2 m_2 = 0$$
$$f m_3 n_3 + g n_3 l_3 + h l_3 m_3 = 0$$

ಆದರೆ, ಪರಸ್ಪರ ಲಂಬ ರೇಖೆಗಳ ದಿಕ್ಕೋಟಿಜ್ಯಾಗಳ ನಡುವೆ

$$m_1 n_1 + m_2 n_2 + m_3 n_3 = 0$$

Hence the above three equations are consistent, the sum of any two equations leading to the third. Also $f : g : h$ are determined by solving two of the equations.

8.4 The condition that the plane $lx + my + nz = 0$ touches the cone $ax^2 + by^2 + cz^2 + 2fyz + 2gzx + 2hxy = 0$.

Let us attempt to solve these equations for $x : y : z$. For tangency, we must obtain two coincident solutions. Eliminating z, by putting $z = -\dfrac{lx + my}{n}$ in the second equation, we obtain, after multiplying by n^2

$$n^2(ax^2 + 2hxy + by^2) + c(lx + my)^2 - 2n(fy + gx) \times (lx + my) = 0$$

or $$x^2(cl^2 + an^2 - 2gnl) + 2xy(hn^2 + clm - gmn - fnl) + y^2(bn^2 + cm^2 - 2fmn) = 0$$

The plane touches the cone if the two values of $x : y$ coincide.

Hence, $$(cl^2 + an^2 - 2gnl)(bn^2 + cm^2 - 2fmn) = (hn^2 + clm - gmn - fnl)^2$$

Expanding and dividing out by n^2, we obtain

$$(bc - f^2)l^2 + (ca - g^2)m^2 + (ab - h^2)n^2 + 2(gh - af)mn + 2(hf - bg)nl + 2(fg - ch)lm = 0$$

This can be briefly written as

$$Al^2 + Bm^2 + Cn^2 + 2Fmn + 2Gnl + 2Hlm = 0$$

where A, B, C, F, G, H are cofactors of the correspondiug small letters in the determinant

$$\Delta \equiv \begin{vmatrix} a & h & g \\ h & b & f \\ g & f & c \end{vmatrix}.$$

This is called the **tangential equation** of the cone.

ಮತ್ತು ಇಂಥ ಇನ್ನೆರಡು ಸಮೀಕರಣಗಳಿರುತ್ತವೆ. ಆದ್ದರಿಂದ ಮೇಲಣ ಸಮೀಕರಣಗಳಲ್ಲಿ, ಎರಡನ್ನು ಕೂಡುವುದರಿಂದ ಮೂರನೆಯದು ಒದಗುತ್ತದೆ. ಎಂದರೆ ಸಮೀಕರಣಗಳು ಸಂಬದ್ಧವಾಗಿವೆ. ಎರಡನ್ನು ಬಿಡಿಸಿ $f : g : h$ ಪಡೆಯಬಹುದು.

೮.೪ $lx + my + nz = 0$ **ತಳ** $ax^2 + by^2 + cz^2 + 2fyz + 2gzx + 2hxy = 0$ **ಶಂಕುವನ್ನು ಸ್ಪರ್ಶಿಸಲು ಬೇಕಾದ ನಿರ್ಬಂಧ.**

ಈ ಸಮೀಕರಣಗಳನ್ನು $x : y : z$ ಗಳಿಗೆ ಬಿಡಿಸಲು ಪ್ರಯತ್ನಿಸೋಣ. ಸ್ಪರ್ಶಕ್ಕೆ ಎರಡು ಐಕ್ಯ ಮೂಲಗಳು ಬರಬೇಕು. ಎರಡನೆಯ ಸಮೀಕರಣದಲ್ಲಿ $z = -\frac{lx+my}{n}$ ಎಂದು ಹಾಕಿದರೆ, z ವಿಸರ್ಜಿತವಾಗುತ್ತದೆ. ವಿಸರ್ಜನಮಾಡಿ n^2 ದಿಂದ ಗುಣಿಸಿದರೆ, $n^2 (ax^2 + 2\,lxy + by^2) + c\,(lx + my)^2 - 2n\,(fy + gx)\,(lx + my) = 0$

ಅಥವಾ

$$x^2 (cl^2 + an^2 - 2gnl) + 2xy(hn^2 + clm - gmn - fnl) + y^2 (bn^2 + cm^2 - 2fmn) = 0$$

ಎಂದು ಬರುತ್ತದೆ.

ದತ್ತ ತಳ ಶಂಕುವನ್ನು ಸ್ಪರ್ಶಿಸಬೇಕಾದರೆ, $x : y$ ಗಳ ಎರಡು ಬೆಲೆಗಳೂ ಐಕ್ಯವಾಗಬೇಕು. ಆದ್ದರಿಂದ

$(cl^2 + an^2 - 2gnl)\,(bn^2 + cm^2 - 2fmn) = (hn^2 + clm - gmn - fnl)^2$. ವಿಸ್ತರಿಸಿ n^2 ದಿಂದ ಭಾಗಿಸಿದ ಮೇಲೆ

$$(bc - f^2)\,l^2 + (ca - g^2)\,m^2 + (ab - h^2)\,n^2 + 2(gh - af)\,mn + 2\,(hf - bg)\,nl + 2\,(fg - ch)\,lm = 0$$

ಎಂದು ಬರುತ್ತದೆ.

$$\triangle \equiv \begin{vmatrix} a & h & g \\ h & b & f \\ g & f & c \end{vmatrix}$$

ಎಂಬ ನಿರ್ಧಾರಕದಲ್ಲಿ, ಸಣ್ಣ ಅಕ್ಷರಗಳ ಸಹಾಪವರ್ತಕಗಳನ್ನು ಅದೇ ದೊಡ್ಡ ಅಕ್ಷರಗಳಿಂದ ಬರೆದರೆ, ಮೇಲಣ ಸಮೀಕರಣವನ್ನು

$$A\,l^2 + B\,m^2 + C\,n^2 + 2F\,mn + 2G\,nl + 2H\,lm = 0$$

ಎಂದು ಬರೆಯಬಹುದು. ಇದನ್ನು ಶಂಕುವಿನ **ಸ್ಪರ್ಶಸಮೀಕರಣ** ಎಂದು ಕರೆಯುತ್ತೇವೆ.

8.5 The reciprocal cone. The line through O whose direction cosines satisfy the above tangential equation generates the cone $Ax^2 + By^2 + Cz^2 + 2Fyz + 2Gzx + 2Hxy = 0.$

But the line $\dfrac{x}{l} = \dfrac{y}{m} = \dfrac{z}{n}$ is the normal to the plane $lx + my + nz = 0.$

Thus, the normals at O to the tangent planes to the cone $ax^2 + by^2 + cz^2 + 2fyz + 2gzx + 2hxy = 0$ generate another cone $Ax^2 + By^2 + Cz^2 + 2Fyz + 2Gzx + 2Hxy = 0.$ This is called the **reciprocal cone** of the former. It can be seen that each of the two cones is the reciprocal of the other, by verifying the relations $BC - F^2 = a\Delta$, $GH - AF = f\Delta$, etc.

8.6 When the plane $lx + my + nz = 0$ does not touch the cone, the quadratic in $x : y$ obtained in § 8.4 gives two solutions $x_1 : y_1$ and $x_2 : y_2$. The equation $lx + my + nz = 0$ gives the corresponding value of z. We thus obtain the direction cosines $x_1 : y_1 : z_1$ and $x_2 : y_2 : z_2$ of the two lines along which the plane intersects the cone.

We now have from the quadratic in $x : y$,

$$\frac{x_1 x_2}{y_1 y_2} = \frac{bn^2 + cm^2 - 2fmn}{cl^2 + an^2 - 2gnl}$$

So, we write

$$x_1 x_2 = \lambda (bn^2 + cm^2 - 2fmn)$$

$$y_1 y_2 = \lambda (cl^2 + an^2 - 2gnl)$$

By symmetry, or by forming a similar equation in $x : z$ as in § 7.4,

$$z_1 z_2 = \lambda (am^2 + bl^2 - 2hlm)$$

೮.೫ ವ್ಯುತ್ಕ್ರಮ ಶಂಕು. O ಮೂಲಕ ಹೋಗತಕ್ಕ ಒಂದು ರೇಖೆಯ ದಿಕ್ಕೋಟಿಜ್ಯಾಗಳು ಮೇಲಿನ ಸ್ಪರ್ಶ ಸಮೀಕರಣವನ್ನು ಸರಿದೂಗಿಸಿದರೆ, ಅಂಥ ರೇಖೆ $A x^2+B y^2+C z^2+2 F yz+2 G zx+2 H xy=0$ ಎಂಬ ಶಂಕುವನ್ನು ಜನಕಿಸುತ್ತದೆ. ಈಗ $\frac{x}{l}=\frac{y}{m}=\frac{z}{n}$ ರೇಖೆ $lx+my+nz=0$ ತಳಕ್ಕೆ ಲಂಬ.

ಆದ್ದರಿಂದ, $ax^2+by^2+cz^2+2fyz+2gzx+2hxy=0$ ಶಂಕುವಿನ ಸ್ಪರ್ಶ ತಳಗಳಿಗೆ O ಮೂಲಕ ಎಳೆದ ಲಂಬಗಳು $A x^2+B y^2+C z^2+2 F y z+2 G z x+2 H xy=0$ ಎಂಬ ಇನ್ನೊಂದು ಶಂಕುವನ್ನು ಜನಕಿಸುತ್ತವೆ. ಇದನ್ನು ಮೊದಲನೆಯ ಶಂಕುವಿನ **ವ್ಯುತ್ಕ್ರಮಶಂಕು** ಎಂದು ಕರೆಯುತ್ತೇವೆ. ಎರಡು ಶಂಕುಗಳೂ ಒಂದಕ್ಕೊಂದು ವ್ಯುತ್ಕ್ರಮ ಎಂಬುದನ್ನು ಗಮನಿಸಬಹುದು, ಏಕೆಂದರೆ $BC-F^2=a\,\Delta$, $GH-AF=f\,\Delta$ ಮುಂತಾದ ಸಂಬಂಧಗಳಿರುತ್ತವೆ.

೮.೬ $lx+my+nz=0$ ತಳ ಶಂಕುವನ್ನು ಸ್ಪರ್ಶಿಸದಿದ್ದಾಗ, § ೮.೪ ರಲ್ಲಿ ಬಂದ $x:y$ ನಲ್ಲಿನ ವರ್ಗ ಸಮೀಕರಣದಿಂದ ಎರಡು ಮೂಲಗಳು $x_1:y_1$ ಮತ್ತು $x_2:y_2$ ಉಂಟಾಗುತ್ತವೆ. ಇವಕ್ಕೆ ಅನುಗುಣವಾದ z ಬೆಲೆ $lx+my+nz=0$ ಸಮೀಕರಣದಿಂದ ಬರುತ್ತದೆ. ಈ ರೀತಿಯಲ್ಲಿ ತಳ ಶಂಕುವನ್ನು ಛೇದಿಸತಕ್ಕ ಎರಡು ರೇಖೆಗಳ ದಿಕ್ಕೋಟಿಜ್ಯಾಗಳಾದ $x_1:y_1:z_1$ ಮತ್ತು $x_2:y_2:z_2$ ದೊರಕುತ್ತವೆ.

ಆದ್ದರಿಂದ, $x:y$ ನಲ್ಲಿನ ವರ್ಗಸಮೀಕರಣದಿಂದ

$$\frac{x_1 x_2}{y_1 y_2}=\frac{bn^2+cm^2-2fmn}{cl^2+an^2-2gnl}$$

ಇದನ್ನು

$$x_1 x_2=\lambda(bn^2+cm^2-2fmn)$$

$$y_1 y_2=\lambda(cl^2+an^2-2gnl)$$ ಎಂದು ಬರೆಯೋಣ.

ಸಮಾಂಗತೆಯಿಂದ ಅಥವಾ ಹೀಗೆಯೇ § ೭.೪ ರಲ್ಲಿ ಪಡೆದಂತೆ $x:z$ ನಲ್ಲಿ ಸಮೀಕರಣವನ್ನು ಪಡೆಯುವುದರಿಂದ,

$$z_1 z_2=\lambda(am^2+bl^2-2hlm).$$

The lines with directions $x_1 : y_1 : z_1$ and $x_2 : y_2 : z_2$ are at right angles, if $x_1 x_2 + y_1 y_2 + z_1 z_2 = 0$

Hence, the plane $lx + my + nz = 0$ **cuts the cone**

$F(x, y, z) \equiv ax^2 + by^2 + cz^2 + 2fyz + 2gzx + 2hxy = 0.$
in **perpendicular generators, if**

$(b+c) l^2 + (c+a) m^2 + (a+b) n^2 - 2fmn - 2gnl - 2hlm - 0.$
Adding $al^2 + bm^2 + cn^2$ to both sides, this condition is conveniently remembered in the form

$$(a+b+c)(l^2+m^2+n^2) = F(l, m, n)$$

8.7 Suppose now that this condition is satisfied, and that the normal at O to the plane $lx + my + nz = 0$ is also a generator of the cone $F(x, y, z) = 0$. Hence $F(l, m, n) = 0$, The above condition then reduces to $a + b + c = 0$. When $a + b + c = 0$, if we select the values of l, m, n as the direction cosines of any generator of the cone $F(x, y, z) = 0$, the condition that $lx + my + nz = 0$ cuts the cone along perpendicular generators is automatically satisfied. These two generators and the normal to the plane then give three mutually perpendicular generators of the cone.

The condition that the cone $F(x, y, z) = 0$ **has three mutually perpendicular generators is that** $a + b + c = 0$.

It is also clear that when this condition holds, the cone has infinitely many sets of three mutually perpendicular generators.

Such a cone is called a **rectangular cone.**

8.8 Equation of the cone with a given vertex and a given base.

$x_1 : y_1 : z_1$ ಮತ್ತು $x_2 : y_2 : z_2$ ದಿಕ್ಕೋಟಿಜ್ಯಾಗಳುಳ್ಳ ರೇಖೆಗಳು ಲಂಬವಾಗಿರಲು $x_1 x_2 + y_1 y_2 + z_1 z_2 = 0$ ಆಗಬೇಕು. ಆದ್ದರಿಂದ

$F(x, y, z) \equiv ax^2 + by^2 + cz^2 + 2fyz + 2gzx + 2hxy$ $= 0$ **ಶಂಕುವನ್ನು** $lx + my + nz = 0$ **ತಳ ಪರಸ್ಪರ ಲಂಬವಾಗಿರುವ ಜನಕ ರೇಖೆಗಳಲ್ಲಿ ಛೇದಿಸಬೇಕಾದರೆ**

$$(b+c)\, l^2 + (c+a)\, m^2 + (a+b)\, n^2 - 2f\,mn - 2g\,nl - 2h\,lm = 0$$

ಎಂಬ ನಿರ್ಬಂಧವಿರಬೇಕು.

ಎರಡು ಕಡೆಗೂ $al^2 + bm^2 + cn^2$ ಕೂಡಿಸಿ ಈ ನಿರ್ಬಂಧವನ್ನು

$$(a+b+c)(l^2+m^2+n^2) = F(l, m, n)$$

ಎಂಬ ರೂಪದಲ್ಲಿ ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು.

೮.೭ ಈ ನಿರ್ಬಂಧ ಸರಿದೂಗಿದೆ ಎನ್ನೋಣ, ಜತೆಗೆ $lx + my + nz = 0$ ತಳಕ್ಕೆ O ನಲ್ಲಿ ಲಂಬ ಸಹ $F(x, y, z) = 0$ ಶಂಕುವಿಗೆ ಒಂದು ಜನಕ ರೇಖೆಯಾಗಿರಲಿ. ಆಗ $F(l, m, n) = 0$. ಮೇಲಿನ ನಿರ್ಬಂಧ $a+b+c = 0$ ಎಂದು ಸುಲಭಗೊಳ್ಳುತ್ತದೆ. $a+b+c = 0$ ಆದಾಗ, $F(x, y, z) = 0$ ಶಂಕುವಿನ ಯಾವುದೇ ಜನಕ ರೇಖೆಯ ದಿಕ್ಕೋಟಿಜ್ಯಾಗಳನ್ನು l, m, n ಎಂದು ತೆಗೆದುಕೊಂಡರೆ, $lx + my + nz = 0$ ತಳ ಶಂಕುವನ್ನು ಲಂಬ ಜನಕಗಳಲ್ಲಿ ಛೇದಿಸಲು ಬೇಕಾದ ನಿರ್ಬಂಧ ತಾನಾಗಿಯೇ ಸರಿಹೋಗಿರುತ್ತದೆ. ಈ ಎರಡು ಜನಕಗಳೂ ತಳದ ಲಂಬವೂ ಒಟ್ಟು ಸೇರಿ ಶಂಕುವಿನ ಮೂರು ಪರಸ್ಪರ ಲಂಬ ಜನಕಗಳಾಗುತ್ತವೆ.

$F(x, y, z) = 0$ **ಶಂಕುವಿಗೆ ಮೂರು ಪರಸ್ಪರ ಲಂಬವಾಗಿರುವ ಜನಕ ರೇಖೆಗಳಿರಬೇಕಾದರೆ,** $a+b+c = 0$ **ಎಂಬ ನಿರ್ಬಂಧವಿರಬೇಕು.**

ಈ ನಿರ್ಬಂಧ ಸರಿಯಿರುವಾಗ, ಹೀಗೆ ಪರಸ್ಪರ ಲಂಬವಾಗಿರುವ ಜನಕರೇಖಾ ತ್ರಯಗಳನ್ನು ಅನಂತ ಸಂಖ್ಯೆಯಲ್ಲಿ ಪಡೆಯಬಹುದೆಂಬುದೂ ಮೇಲಣ ಚರ್ಚೆಯಿಂದ ವ್ಯಕ್ತವಾಗುತ್ತದೆ.

ಇಂಥ ಶಂಕುವಿಗೆ **ಆಯಾಕಾರ ಶಂಕು** ಎಂದು ಹೆಸರು.

೮.೮ ಶೃಂಗವೂ ಮೂಲರೇಖೆಯೂ ದತ್ತವಾಗಿದ್ದರೆ, ಶಂಕುವಿನ ಸಮೀಕರಣವನ್ನು ಪಡೆಯುವಿಕೆ.

When the vertex is the origin, and the base is given as the intersection of two surfaces, the equation of the cone is readily obtained by obtaining a homogeneous equation by the help of the equations of the two surfaces.

As an example, to find the cone whose vertex is the origin, and whose base is the curve

$$ax^2 + by^2 = 2z, \; lx + my + nz = p.$$

The required equation is

$$p\,(ax^2 + by^2) = 2z\,(lx + my + nz).$$

When the vertex is any other point (α, β, γ), the following process is convenient.

To find the cone whose vertex is the point (α, β, γ), and whose base is the parabola $y^2 = 4ax$, $z = 0$.

Any line through (α, β, γ) is $\dfrac{x-\alpha}{l} = \dfrac{y-\beta}{m} = \dfrac{z-\gamma}{n} = r.$

This will be a generator of the cone, if it intersects the curve. Hence, for some value of r, the point $(\alpha + lr, \beta + mr, \gamma + nr)$ satisfies both the equations $y^2 = 4ax$ and $z = 0$

$$\therefore \quad (\beta + mr)^2 = 4a\,(\alpha + lr), \; \gamma + nr = 0$$

Putting $r = -\dfrac{\gamma}{n}$, we eliminate r

$$\therefore \quad (\beta n - \gamma m)^2 = 4an\,(\alpha n - \gamma l)$$

Substituting $l : m : n = x-\alpha : y-\beta : z-\gamma$, we get the equation of the cone

$$\therefore \quad (\beta.\overline{z-r} - \gamma.\overline{y-\beta})^2 = 4a\,(z-\gamma)\,(\alpha.\overline{z-\gamma} - \gamma.\overline{x-\alpha})$$

$$\text{or} \quad (\beta z - \gamma y)\,y = 4a\,(z-\gamma)\,(\alpha z - \gamma x)$$

Exercises 8.1

1 Find the equation of the right circular cone whose vertex is the origin, the direction cosines of the axis are $l : m : n$, and semivertical angle is α.

ಶೃಂಗ ಮೂಲಬಿಂದುವಾಗಿ ಮೂಲರೇಖೆ ಎರಡು ಮೇಲ್ಮೈಗಳ ಸಂಧಿರೇಖೆ ಯಾಗಿದ್ದರೆ, ಈ ಮೇಲ್ಮೈಗಳ ಸಮೀಕರಣಗಳ ದೆಸೆಯಿಂದ ಒಂದು ಸಮಘಾತದ ಸಮೀಕರಣವನ್ನು ಪಡೆಯುವುದರಿಂದ ಶಂಕುವಿನ ಸಮೀಕರಣ ಒಡನೆಯೇ ಲಭಿಸು ವುದು. ಒಂದು ಉದಾಹರಣೆಯಿಂದ ಇದು ಸ್ಪಷ್ಟವಾಗುವುದು.

ಶೃಂಗ ಮೂಲಬಿಂದುವಾಗಿ ಮೂಲರೇಖೆ $ax^2+by^2 = 2z$, $lx+my+nz = p$ ಆಗಿರುವ ಶಂಕುವಿನ ಸಮೀಕರಣ ವನ್ನು ಪಡೆಯಿರಿ.

ಬೇಕಾದ ಸಮೀಕರಣ : $p\ (ax^2+by^2) = 2z\,(lx+my+nz)$. ಶೃಂಗ ಬೇರೆ ಯಾವುದಾದರೂ ಬಿಂದು (α, β, γ) ಆದಾಗ, ಕೆಳಗಿನ ವಿಧಾನ ಅನು ಕೂಲಿಸುವುದು,

ಶೃಂಗ (α, β, γ) ಬಿಂದು, ಮೂಲರೇಖೆ $y^2 = 4ax$, $z = 0$ ಎಂಬ ಪ್ಯರಾಬೊಲವಾಗಿ ಉಳ್ಳ ಶಂಕುವನ್ನು ಪಡೆಯಿರಿ.

(α, β, γ) ಮೂಲಕ ಹೋಗುವ ಯಾವುದೇ ರೇಖೆ

$\dfrac{x-\alpha}{l} = \dfrac{y-\beta}{m} = \dfrac{z-\gamma}{n} = r$. ಇದು ಶಂಕುವಿನ ಜನಕರೇಖೆಯಾದರೆ, ಅದು ಮೂಲ ರೇಖೆಯನ್ನು ಸಂಧಿಸಬೇಕು. ಆದ್ದರಿಂದ, r ನ ಯಾವುದೋ ಬೆಲೆಗೆ, $(\alpha+lr, \beta+mr, \gamma+nr)$ ಬಿಂದು $y^2 = 4ax$ ಮತ್ತು $z = 0$ ಈ ಎರಡು ಸಮೀಕರಣಗಳನ್ನೂ ಸರಿದೂಗಿಸಬೇಕು.

$$\therefore\ (\beta+mr)^2 = 4a\,(\alpha+lr), \quad \gamma+nr = 0$$

$r = -\dfrac{\gamma}{n}$ ಹಾಕಿ, r ನ್ನು ವಿಸರ್ಜಿಸುವೆವು.

$$\therefore\ (\beta n-\gamma m)^2 = 4an\,(\alpha n-\gamma l)$$

$l : m : n = x-\alpha : y-\beta : z-\gamma$ ಎಂದು ಹಾಕಿದರೆ, ಶಂಕುವಿನ ಸಮೀಕರಣ

$$(\beta.\overline{z-\gamma} - \gamma.\overline{y-\beta})^2 = 4a\,(z-\gamma)\,(\alpha.\overline{z-\gamma} - \gamma.\overline{x-\alpha})$$

ಅಥವಾ $(\beta z-\gamma y)^2 = 4a\,(z-\gamma)\,(\alpha z-\gamma x)$ ಎಂದಾಗುತ್ತದೆ.

ಅಭ್ಯಾಸ 8.1

1 ಶೃಂಗ ಮೂಲಬಿಂದು, ಅಕ್ಷದ ದಿಕ್ಕೋಟಿಜ್ಯಾಗಳು $l : m : n$, ಶೃಂಗಾರ್ಧ ಕೋನ α ಉಳ್ಳ ಲಂಬವೃತ್ತೀಯ ಶಂಕುವಿನ ಸಮೀಕರಣವನ್ನು ಪಡೆಯಿರಿ.

[If OP (x, y, z) is any point on the cone, the angle between OP and the line $l : m : n$ is α.]

2 Deduce that the equation $(x^2 + y^2 + z^2) = \lambda (lx + my + nz)^2$ represents a right circular cone whose semivertical angle is gievn by $\lambda \cos^2 \alpha = (l^2 + m^2 + n^2)^{-1}$.

3 Find the equation of the right circular cone whose vertex is (α, β, γ), the direction cosines of the axis are $l : m : n$, and semivertical angle is α.

4 Find the directions of the lines of intersection of the plane $x - 5y + 3z = 0$ with the cone $7x^2 + 5y^2 - 3z^2 = 0$.

5 Find the directions of the lines of intersection of the plane $3x + y + 5z = 0$ with the cone

$6yz - 2zx + 5xy = 0$

6 Prove that the cones

$$ax^2 + by^2 + cz^2 = 0 \text{ and } \frac{x^2}{a} + \frac{y^2}{b} + \frac{z^2}{c} = 0$$

are mutually reciprocal.

7 Prove that the perpendiculars through the origin to the tangent planes of the cone

$3x^2 + 4y^2 - 5z^2 - 2yz + 4zx - 6xy = 0$ generate the cone $21x^2 + 19y^2 - 3z^2 + 6yz + 10zx + 34xy = 0$.

8 Prove that the cone

$ax^2 + by^2 + cz^2 + 2fyz + 2gzx + 2hxy = 0$

has three mutually perpendicular tangent planes if

$bc + ca + ab = f^2 + g^2 + h^2$.

[The reciprocal cone is rectangular. $\therefore$ A + B + C = 0]

9 Write down the condition that the plane

$ax + by + cz = 0$ cuts the cone $fyz + gzx + hxy = 0$ in perpendicular generators.

10 Prove that the plane $lx + my + nz = 0$ cuts the cone $ax^2 + by^2 - (a + b) z^2 + 2fyz + 2gzx + 2hxy = 0$

in perpendicular lines if

[ಶಂಕುವಿನ ಮೇಲೆ P $(x, y\ z)$ ಯಾವುದೇ ಬಿಂದುವಾದರೆ, OP ಗೂ $l : m : n$ ರೇಖೆಗೂ ನಡುವಣ ಕೋನ α]

2 ಆದ್ದರಿಂದ, $(x^2 + y^2 + z^2) = \lambda\ (l x + m y + n z)^2$ ಸಮೀಕರಣ ಒಂದು ಲಂಬವೃತ್ತೀಯಂ ಶಂಕುವನ್ನು ಕೊಡುತ್ತದೆ. ಅದರ ಶೃಂಗಾರ್ಧ ಕೋನ $\lambda \cos^2 \alpha = (l^2 + m^2 + n^2)^{-1}$ ಎಂಬುದರಿಂದ ದೊರೆಯುತ್ತದೆ ಎಂದು ಸಾಧಿಸಿ.

3 ಶೃಂಗ (α, β, γ) ಬಿಂದು, ಅಕ್ಷದ ದಿಕ್ಕೋಟಿಜ್ಯಾಗಳು l, m, n ಶೃಂಗಾರ್ಧ ಕೋನ α ಉಳ್ಳ ಲಂಬವೃತ್ತೀಯ ಶಂಕುವಿನ ಸಮೀಕರಣವನ್ನು ಪಡೆಯಿರಿ.

4 $x - 5y + 3z = 0$ ತಳ $7x^2 + 5y^2 - 3z^2 = 0$ ಶಂಕುವನ್ನು ಛೇದಿಸುವ ರೇಖೆಗಳ ದಿಕ್ಪ್ರಮಾಣಗಳನ್ನು ಪಡೆಯಿರಿ.

5 $3x + y + 5z = 0$ ತಳ $6yz - 2zx + 5xy = 0$ ಶಂಕುವನ್ನು ಛೇದಿಸುವ ರೇಖೆಗಳ ದಿಕ್ಪ್ರಮಾಣಗಳನ್ನು ಪಡೆಯಿರಿ.

6 $ax^2 + by^2 + cz^2 = 0$ ಮತ್ತು $\dfrac{x^2}{a} + \dfrac{y^2}{b} + \dfrac{z^2}{c} = 0$ ಪರಸ್ಪರ ವ್ಯುತ್ಕ್ರಮ ಶಂಕುಗಳೆಂದು ತೋರಿಸಿ.

7 $3x^2 + 4y^2 - 5z^2 - 2yz + 4zx - 6xy = 0$ ಶಂಕುವಿನ ಸ್ಪರ್ಶತಳಗಳಿಗೆ ಮೂಲಬಿಂದುವಿನಲ್ಲಿ ಎಳೆದ ಲಂಬಗಳು $21x^2 + 19y^2 - 3z^2 + 6yz + 10zx + 34xy = 0$ ಶಂಕುವನ್ನು ಜನಕಿಸುತ್ತವೆ ಎಂದು ತೋರಿಸಿ.

8 $ax^2 + by^2 + cz^2 + 2fyz + 2gzx + 2hxy = 0$ ಶಂಕುವಿಗೆ ಮೂರು ಪರಸ್ಪರ ಲಂಬಗಳಾಗಿರುವ ಸ್ಪರ್ಶತಳಗಳಿದ್ದರೆ, $bc + ca + ab = f^2 + g^2 + h^2$ ಎಂದು ತೋರಿಸಿ.

[ವ್ಯುತ್ಕ್ರಮ ಶಂಕು ಆಯಾಕಾರವುಳ್ಳದ್ದು $\therefore$ A+B+C = 0]

9 $ax + by + cz = 0$ ತಳ $fyz + g\,zx + hxy = 0$ ಶಂಕುವನ್ನು ಲಂಬ ಜನಕಗಳಲ್ಲಿ ಛೇದಿಸಲು ಬೇಕಾದ ನಿರ್ಬಂಧವನ್ನು ಪಡೆಯಿರಿ.

10 $lx + my + nz = 0$ ತಳ
$ax^2 + by^2 - (a+b)z^2 + 2fyz + 2gzx + 2hxy = 0$ ಶಂಕುವನ್ನು ಲಂಬರೇಖೆಗಳಲ್ಲಿ ಛೇದಿಸಿದರೆ,

$$al^2 + bm^2 - (a+b)n^2 + 2fmn + 2gnl + 2hlm = 0.$$

[The normal to the plane must lie on the cone]

11 If a right circular cone has three mutually perpendicular generators, prove that its semivertical angle is $\tan^{-1}\sqrt{2}$

[Take the base as the circle $x^2 + y^2 = a^2, z = 0$ and the vertex as $(0, 0, r)$]

12 Find the locus of points from which three mutually perpendicular lines can be drawn to intersect the conic $ax^2 + by^2 = 1, z = 0$.

13 Prove that the locus of points from which three mutually perpendicular planes can be drawn to touch the ellipse

$$\frac{x^2}{a^2} + \frac{y^2}{b^2} = 1, \quad z = 0 \text{ is the sphere}$$

$$x^2 + y^2 + z^2 = a^2 + b^2.$$

14 Find the equation of the cone with vertex at the origin and base the circle

$$x^2 + y^2 + z^2 + 2ux + 2vy + 2wz + d = 0,$$
$$lx + my + nz = p.$$

15 The equation to the cone whose vertex is the origin and base the curve

$$f(x, y) = 0, z = k \text{ is } f\left(\frac{kx}{z}, \frac{ky}{z}\right) = 0.$$

16 The plane $\frac{x}{a} + \frac{y}{b} + \frac{z}{c} = 1$ meets the coordinate axes in A, B, C. Prove that the equation of the cone joining O to the circle A B C is

$$yz\left(\frac{b}{c} + \frac{c}{b}\right) + zx\left(\frac{c}{a} + \frac{a}{c}\right) + xy\left(\frac{a}{b} + \frac{b}{a}\right) = 0$$

$al^2 + bm^2 - (a+b)n^2 + 2fmn + 2gnl + 2hlm = 0$ ಎಂದು ತೋರಿಸಿ.

[ತಳದ ಲಂಬ ಶಂಕುವಿನ ಮೇಲಿರಬೇಕು.]

11 ಲಂಬವೃತ್ತೀಯ ಶಂಕುವಿಗೆ ಮೂರು ಪರಸ್ಪರ ಲಂಬ ಜನಕಗಳಿದ್ದರೆ ಅದರ ಶೃಂಗಾರ್ಧ ಕೋನ $\tan^{-1}\sqrt{2}$ ಎಂದು ತೋರಿಸಿ.

[ಮೂಲ ರೇಖೆಯನ್ನು $x^2+y^2=a^2$, $z = 0$ ವೃತ್ತವನ್ನಾಗಿಯೂ ಶೃಂಗವನ್ನು $(0, 0, \gamma)$ ಎಂದೂ ತೆಗೆದುಕೊಳ್ಳಿ.]

12 ಒಂದು ಬಿಂದುವಿನಿಂದ $ax^2+by^2 = 1$, $z = 0$ ಶಂಕುಜವನ್ನು ಸಂಧಿಸುವಂತೆ ಮೂರು ಪರಸ್ಪರ ರೇಖೆಗಳನ್ನೆಳೆಯಬಹುದಾದರೆ, ಬಿಂದುವಿನ ಪಥವನ್ನು ಪಡೆಯಿರಿ.

13 ಒಂದು ಬಿಂದುವಿನಿಂದ $\frac{x^2}{a^2} + \frac{y^2}{b^2} = 1$, $z = 0$ ದೀರ್ಘವೃತ್ತವನ್ನು ಸ್ಪರ್ಶಿಸುವಂತೆ ಮೂರು ಪರಸ್ಪರ ಲಂಬ ತಳಗಳನ್ನು ಎಳೆಯಬಹುದಾದರೆ, ಬಿಂದುವಿನ ಪಥ $x^2+y^2+z^2 = a^2+b^2$ ಗೋಳ ಎಂದು ಸಾಧಿಸಿ.

14 ಶೃಂಗ ಮೂಲಬಿಂದು, ಮೂಲರೇಖೆ $x^2+y^2+z^2+2ux+2vy+2wz+d = 0$, $lx+my+nz = p$ ಎಂಬ ವೃತ್ತವಾಗಿ ಉಳ್ಳ ಶಂಕುವಿನ ಸಮೀಕರಣವನ್ನು ಪಡೆಯಿರಿ.

15 ಶೃಂಗ ಮೂಲಬಿಂದು, ಮೂಲರೇಖೆ $f(x, y) = 0$, $z=k$ ಎಂಬ ರೇಖೆಯಾಗಿ ಉಳ್ಳ ಶಂಕುವಿನ ಸಮೀಕರಣ $f\left(\frac{kx}{z}, \frac{y}{z}\right) = 0$.

16 $\frac{x}{a} + \frac{y}{b} + \frac{1z}{c} =$ ತಳ ನಿರ್ದೇಶಕಾಕ್ಷಗಳನ್ನು ABC ಗಳಲ್ಲಿ ಸಂಧಿಸುತ್ತದೆ. O ಬಿಂದುವನ್ನು ABC ವೃತ್ತಕ್ಕೆ ಸೇರಿಸುವ ಶಂಕುವಿನ ಸಮೀಕರಣ

$$yz\left(\frac{b}{c}+\frac{c}{b}\right) + zx\left(\frac{c}{a}+\frac{a}{c}\right) + xy\left(\frac{a}{b}+\frac{b}{a}\right) = 0$$

ಎಂದು ತೋರಿಸಿ.

17 A cone stands on the curve $F(x, y)=0$, $z=0$, and its vertex is (a, b, c). Show that the section of the cone by the zy-plane is the curve

$$F\left(\frac{az}{z-c}, \frac{bz-cy}{z-c}\right)=0, \ x=0.$$

18 If the equation $ax^2+by^2+cz^2+2fyz+2gzx+2hxy+2ux+2vy+2wz+d=0$ represents a cone show that

$$\begin{vmatrix} a & h & g & u \\ h & b & f & v \\ g & f & c & w \\ u & v & w & d \end{vmatrix}=0$$

[If the vertex is (x_1, y_1, z_1), transfer the origin to (x_1, y_1, z_1). Only the second degree terms should remain.]

19 Prove that the equation $x^2+2y^2-3z^2+2yz-3zx+2xy-3x+16y-17z-11=0$ is a cone. Find the coordinates of the vertex.

8.9. The cylinder. Consider the equation $F(x, y)=0$. The equation is independent of z. If we specify z, by putting $z=c$, the equations $F(x, y)=0$, $z=c$ denote a plane curve in the plane $z=c$. This curve is shifted parallel to its plane when the value of c is varied. The aggregate of all these curves is a surface whose equation is $F(x, y)=0$. This equation therefore denotes a cylinder standing on the base $F(x, y)=0$, $z=c$ (for any value of c).

We can also give a different approach. The equations $x=x_1$, $y=y_1$ represent a line parallel to the z-axis. The line meets the curve $F(x, y)=0$, $z=c$ if $F(x_1, y_1)=0$. If then we draw a line through any point of the curve parallel to the z-axis, any point on this line satisfies the equation $F(x, y)=0$. The equation $F(x, y)=0$ then denotes a surface generated by lines parallel to the z–axis and meeting the curve $F(x, y)=0$, $z=c$. It is thus a cylinder.

17 ಒಂದು ಶಂಕು $F(x, y) = 0$, $z = 0$ ರೇಖೆಯ ಮೇಲೆ ನಿಂತಿದೆ. ಅದರ ಶೃಂಗ (a, b, c). yz – ತಳದಿಂದ ಶಂಕುವಿನ ಛೇದ $F\left(\frac{ax}{z-c}, \frac{bz-cy}{z-c}\right) = 0$, $x = 0$ ಎಂಬ ರೇಖೆ ಎಂದು ತೋರಿಸಿ

18 $ax^2+by^2+cz^2+2fyz+2gzx+2hxy+2ux+2vy+2wz+d=0$ ಸಮೀಕರಣ ಒಂದು ಶಂಕುವನ್ನು ಕೊಡುವುದಾದರೆ

$$\begin{vmatrix} a & h & g & u \\ h & b & f & v \\ g & f & c & w \\ u & v & w & d \end{vmatrix} = 0$$ ಎಂದು ತೋರಿಸಿ.

[ಶೃಂಗ (x_1, y_1, z_1) ಆದರೆ, ಮೂಲಬಿಂದುವನ್ನು (x_1, y_1, z_1) ಗೆ ವರ್ಗಾಯಿಸಿ. ಎರಡನೆಯ ಡಿಗ್ರಿಯ ಪದಗಳು ಮಾತ್ರ ನಿಲ್ಲಬೇಕು.]

19 $x^2+2y^2-3z^2+2yz-3zx+2xy-3x+16y-17z-11=0$ ಸಮೀಕರಣ ಒಂದು ಶಂಕುವೆಂದು ತೋರಿಸಿ. ಶೃಂಗದ ನಿರ್ದೇಶಕಗಳನ್ನು ಬರೆಯಿರಿ.

೮.೯. ಸಿಲಿಂಡರ್. $F(x, y) = 0$ ಎಂಬ ಸಮೀಕರಣವನ್ನು ಪರಿಶೀಲಿಸುವ ಇದು zನ್ನು ಅವಲಂಬಿಸಿಯೇ ಇಲ್ಲ. z ಗೆ ಏನಾದರೂ ಬೆಲೆ ಕೊಟ್ಟರೆ, ಉದಾ : $z=c$, $F(x, y) = 0$, $z=c$ ಎಂಬ ಸಮೀಕರಣಗಳು $z=c$ ತಳದಲ್ಲಿರುವ ಒಂದು ಸಮತಳ ರೇಖೆಯನ್ನು ಕೊಡುತ್ತವೆ. c ಯ ಬೆಲೆಯನ್ನು ಬದಲಾಯಿಸಿದಂತೆ, ಈ ರೇಖೆ ಅದರ ತಳಕ್ಕೆ ಸಮಾಂತರವಾಗಿ ಎತ್ತಲ್ಪಡುತ್ತದೆ. ಈ ಎಲ್ಲ ರೇಖೆಗಳ ಸಮುಚ್ಚಯ ಒಂದು ಮೇಲ್ಮೈಯನ್ನು ಉಂಟುಮಾಡುತ್ತದೆ. ಇದರ ಸಮೀಕರಣ $F(x, y) = 0$. ಆದ್ದರಿಂದ ಈ ಸಮೀಕರಣ $F(x, y) = 0$, $z=c$ (c ಗೆ ಯಾವುದೇ ಬೆಲೆಯಿರಲಿ) ಎಂಬ ಮೂಲರೇಖೆಯ ಮೇಲೆ ನಿಂತಿರುವ ಸಿಲಿಂಡರ್.

ಬೇರೊಂದು ವಿಧದಲ್ಲಿ ಚರ್ಚಿಸಬಹುದು. $x=x_1$, $y=y_1$ ಎಂಬ ಸಮೀಕರಣಗಳು z– ಅಕ್ಷಕ್ಕೆ ಸಮಾಂತರವಾಗಿರುವ ಒಂದು ಸರಳರೇಖೆಯನ್ನು ಕೊಡುತ್ತವೆ. $F(x_1, y_1) = 0$ ಆದಾಗ, ಈ ರೇಖೆ $F(x, y) = 0$, $z=c$ ಎಂಬ ವಕ್ರರೇಖೆಯನ್ನು ಸಂಧಿಸುತ್ತದೆ. ಆದ್ದರಿಂದ, ಈ ವಕ್ರರೇಖೆಯ ಯಾವುದೇ ಬಿಂದುವಿನ ಮೂಲಕ z– ಅಕ್ಷಕ್ಕೆ ಸಮಾಂತರವಾಗಿ ಸರಳರೇಖೆಯನ್ನೆಳೆದರೆ, ಈ ಸರಳರೇಖೆಯ ಮೇಲಣ ಬಿಂದುಗಳೆಲ್ಲ $F(x, y) = 0$ ಸಮೀಕರಣಕ್ಕೆ ಹೊಂದಿಕೊಳ್ಳುತ್ತವೆ. ಆದ್ದರಿಂದ $F(x, y) = 0$ ಸಮೀಕರಣ $F(x, y) = 0$ $z=c$ ವಕ್ರರೇಖೆಯನ್ನು ಸಂಧಿಸಿ z–ಅಕ್ಷಕ್ಕೆ ಸಮಾಂತರವಾಗಿರುವ ಸರಳರೇಖೆಗಳಿಂದ ಜನ್ಯವಾಗುವ ಒಂದು ಮೇಲ್ಮೈ. ಆದ್ದರಿಂದ ಅದು ಒಂದು ಸಿಲಿಂಡರ್.

Similarly, F $(y, z) = 0$ is a cylinder whose cross-section is parallel to the plane $x = 0$.

The general equation of a quadric cylinder with generators parallel to the z-axis is

$$ax^2 + 2hxy + by^2 + 2gx + 2fy + c = 0.$$

In particular, $\frac{x^2}{a^2} + \frac{y^2}{b^2} = 1$ denotes an elliptic cylinder, $\frac{x^2}{a^2} - \frac{y^2}{b^2} = 1$ a hyperbolic cylinder, and $y^2 = 4ax$ a parabolic cylinder.

A cylinder can be considered as a limiting form of a cone with its vertex at infinity, in the direction parallel to the generators of the cylinder.

ಹೀಗೆಯೇ $F(y, z) = 0$ ಎಂಬುದು $x=0$ ತಳಕ್ಕೆ ಸಮಾಂತರವಾದ ಅಡ್ಡ ಛೇದವುಳ್ಳ ಸಿಲಿಂಡರ್.

ಜನಕರೇಖೆಗಳು z—ಅಕ್ಷಕ್ಕೆ ಸಮಾಂತರವಾಗಿರುವ ಎರಡನೆಯ ಡಿಗ್ರಿಯ ಸಿಲಿಂಡರಿನ ಸಾರ್ವತ್ರಿಕ ಸಮೀಕರಣ

$ax^2 + 2lxy + by^2 + 2gx + 2fy + c = 0$ ಆಗಿರುತ್ತದೆ.

ವೈಶೇಷಿಕವಾಗಿ, $\frac{x^2}{a^2} + \frac{y^2}{b^2} = 1$ ಎಂಬುದು ಒಂದು ದೀರ್ಘವೃತ್ತೀಯ ಸಿಲಿಂಡರ್, $\frac{x_2}{a^2} - \frac{y^2}{b^2} = 1$ ಎಂಬುದು ಹೈಪರ್‌ಬೋಲಿಯ ಸಿಲಿಂಡರ್, $y^2 = 4ax$ ಎಂಬುದು ಪ್ಯರಾಬೊಲೀಯ ಸಿಲಿಂಡರ್.

ಸಿಲಿಂಡರನ್ನು ಅದರ ಜನಕರೇಖೆಗಳ ದಿಕ್ಕಿನಲ್ಲಿ ಅನಂತ ಬಿಂದುವಿನಲ್ಲಿ ಶೃಂಗವಾಗಿ ಉಳ್ಳ ಶಂಕುವೆಂದು ಭಾವಿಸಬಹುದು.

SOLUTIONS

ಉತ್ತರಗಳು

ಅಧ್ಯಾಯ ೭

1 $x^2 + y^2 + z^2 - 9x - 5y - 7z = 0$

2 $x^2 + y^2 + z^2 - ax - by - cz = 0\,;\ \dfrac{x}{a} + \dfrac{y}{b} + \dfrac{z}{c} = 1$

$ka\,(b^{-2} + c^{-2}),\quad kb\,(c^{-2} + a^{-2}),\ kc\ \ (a^{-2} + b^{-2})$, ಇಲ್ಲಿ

$$k = \frac{1}{2(a^{-2} + b^{-2} + c^{-2})}$$

4 $(ul + vm + wn - p)^2 = (u^2 + v^2 + w^2)\ (u^2 + v^2 + w^2 - d)$

7 $\left(\dfrac{2}{19}, \dfrac{3}{19}, \dfrac{5}{19}\right)$

13 $x^2 + y^2 + z^2 + 2x + 4y + 6z - 11 = 0$

$5\,(x^2 + y^2 + z^2) - 4x - 8y - 12z - 13 = 0$

14 $3\,(x^2 + y^2 + z^2) = (x + y + z - 5)^2$ ಎಂಬ ಮೇಲ್ಮೈ

16 $x^2 + y^2 + z^2 - 5x + y + z - 11 = 0$

19 $2x^2 + 2y^2 + 2z^2 - x + 5y - 8z - 2 = 0$

21 $x^2 + y^2 + z^2 - ax - by - cz = 0$

ಅಧ್ಯಾಯ ೮

1 $(l^2 + m^2 + n^2)\ (x^2 + y^2 + z^2) =$

$\sec^2 \alpha\,(lx + my + nz)^2$

3 $[\,l\,(x - \alpha) + m\,(y - \beta) + n\,(z - \gamma)\,]\ \sec^2 \alpha =$

$(l^2 + m^2 + n^2)\ [\,(x - \alpha)^2 + (y - \beta)^2 + (z - \gamma)^2\,]$

4 $1 : 2 : 3$ ಮತ್ತು $-1 : 1 : 2$

5 $1 : 2 : -1$ ಮತ್ತು $2 : -1 : -1$

9 $bcf + cag + abh = 3$

12 $ax^2 + by^2 + (a + b)\,z^2 = 1$ ಎಂಬ ಮೇಲ್ಮೈ

14 $p^2\,(x^2 + y^2 + z^2) + 2p\,(lx + my + nz)$

$\times\,(ux + vy + wz) + d\,(lx + my + nz)^2$

19 $(-1, -2, -3)$.

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಉಪನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560039

ಈಸ್ಟರ್ನ್ ಪ್ರೆಸ್, ಬೆಂಗಳೂರು-560029